## ಅಧ್ಯಾಯ 8

# ವಿಗ್ರಹಗಳಿಗೆ ಜ್ಞಾನ ಮತ್ತು ಮಾಂಸದ ನೈವೇದ್ಯ

ಕೊರಿಂಥ ಸಭೆಯವರಿಗೆ ಪೌಲನು ಬರೆದ ಪತ್ರವು (7:1) ಮದುವೆ ಮತ್ತು ನೈತಿಕತೆಯ ಕುರಿತು ಪ್ರಶ್ನೆಯನ್ನು, ಅಥವಾ ಬಹುಶಃ ಅನೇಕ ಪ್ರಶ್ನೆಗಳನ್ನು ಒಳಗೊಂಡಿದೆ. ಗ್ರೀಕೋ ರೋಮನರ ಆಚರಣೆಗಳಿಂದ ಯೆಹೂದಿ ಮತ್ತು ಕ್ರೈಸ್ತರನ್ನು ಬೇರ್ಪಡಿಸುವಲ್ಲಿ ಮಹತ್ತರ ವಿಭಜನೆಯನ್ನು ನೀಡಿದೆ, ಕೊರಿಂಥ ಸಭೆಯವರು ಶ್ರಮಿಸುತ್ತಿರುವದರಲ್ಲಿ ಏನು ಆಶ್ಚರ್ಯವಿಲ್ಲ. ಈ ಮುಂಚಿನ ವಿಗ್ರಹಾರಾಧಕ ವಿಶ್ವಾಸಿಗಳು ಮದುವೆ, ತತ್ವ ನಿಷ್ಠೆ ಮತ್ತು ಕುಟುಂಬ ಜೀವನದ ತೊಡಕುಗಳ ಮತ್ತು ಪರಿಣಾಮಗಳ ಕುರಿತಾದ ತಮ್ಮ ಅಲೋಚನೆಗಳನ್ನು ಸರಿಪಡಿಸಿಕೊಳ್ಳಬೇಕಾಗಿದೆ. ಕ್ರಿಸ್ತನಲ್ಲಿ ನಂಬಿಕೆಯು ಪಶ್ಚಾತ್ತಾಪಕ್ಕೋಸ್ಕರದ ಕರೆಯಾಗಿದೆ, ಜೀವನಶೈಲಿಯಲ್ಲಿಯ ಪ್ರಮುಖ ಬದಲಾವಣೆಯಾಗಿದೆ. ವಿಗ್ರಹಾರಾಧಕರ ಅನೈತಿಕತೆಯು ಅವರನ್ನೇ ವಿನಾಶಕ್ಕೆ ನಡೆಸುವಂಥದ್ದಾಗಿದೆ ಮತ್ತು ದೇವರಿಗೆ ಅವಮಾನವನ್ನು ತರುತ್ತದೆ. ಈ ಹಳೆಯ ಆಚರಣೆಗಳು ಅವರಿಗೋಸ್ಕರ ಸಭೆಯಲ್ಲಿ ಸ್ವೀಕರಿಸಲು ಸಾಧ್ಯವಿಲ್ಲ.

ಒಂದು ವೇಳೆ ಇದು ಪೌಲನಿಗೆ ಕಳುಹಿಸಿದ ಪ್ರಶ್ನೆಗಳಿಗೆ ಉತ್ತರಿಸುವದನ್ನು ಪರಿಚಯಿಸಲು "ಈಗ ನೋಡೋಣ" ಎಂಬುದು ಒಂದು ವಿಧಾನವಾಗಿರಬಹುದು, ಆಗ ಕೊರಿಂಥ ಸಭೆಯವರು ವಿಗ್ರಹಾರಾಧನೆ ಅಲ್ಲದೇ ಅನೈತಿಕತೆಯನ್ನು ಬಿಟ್ಟು ಬಿಡುವದಕ್ಕಾಗಿ ಸಹಾಯವನ್ನು ಯಾಚಿಸುತ್ತಿದ್ದರು. 8:1ರ ನಂತರ, "ಈಗ ನೋಡೋಣ" ಮುಂದೆ 12:1ರಲ್ಲಿದೆ. ಆದಾಗ್ಯೂ ಅಧ್ಯಾಯ 8ರಿಂದ 11ರ ವರೆಗೆ ಇರುವ ಪ್ರಾಮುಖ್ಯವಾದ ಸಂಬಂಧ "ವಿಗ್ರಹಗಳಿಗೆ ಸಮರ್ಪಿಸಿದ ಸಂಗತಿಗಳು" (8:1, 4, 10), 11:2-34ರ ಸಂದರ್ಭಕ್ಕೆ ಹೊಂದುವದು ಕಷ್ಟ.

ಪ್ರಾಚೀನ ಜಗತ್ತಿನಲ್ಲಿ, ಧರ್ಮವು ಜೀವನದ ಪ್ರತಿ ಅಂಶದೊಂದಿಗೆ ಹೆಣೆದದ್ದಾಗಿದೆ. ಒಬ್ಬ ವ್ಯಕ್ತಿಯ ಉದ್ಯೋಗ, ಕುಟುಂಬ ಜೀವನ, ಬಿಡುವಿನ ಸಮಯ, ಸಾಮಾಜಿಕ ಒಳಗೊಳ್ಳುವಿಕೆ, ಮತ್ತು ರಾಜಕೀಯ ಇವೆಲ್ಲವೂ ಧಾರ್ಮಿಕ ಅಂಗಗಳಾಗಿವೆ. ಒಬ್ಬ ವಿಗ್ರಹಾರಾಧಕನು ಕ್ರೈಸ್ತನಾದ ನಂತರದ ಅವನ ಪರಿವರ್ತನೆಯು ಅವನ ದಿನದ ಪ್ರತಿ ಕ್ಷಣದ ಮೇಲೆ ಪರಿಣಾಮವನ್ನು ಬೀರುತ್ತದೆ. ಉದಾಹರಣೆಗೆ, ಪ್ರಾಚೀನದ ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ, ಈ ದಿನದ ಜನರಲ್ಲಿ ಇದ್ದ ಹಾಗೆ ಒಟ್ಟಿಗೆ ಊಟಮಾಡುವದು ಒಂದು ಮುಖ್ಯವಾದ ಭಾಗವಾಗಿತ್ತು. ಮೊದಲನೆಯ ಶತಮಾನದ ಸಭೆಯ ಸದಸ್ಯರುಗಳು

ತಮ್ಮ ಹಿಂದಿನ ವಿಗ್ರಹಾರಾಧನೆಯ ಆಚರಣೆಗಳಿಗಾಗಿ ಪಶ್ಚಾತ್ತಾಪಹೊಂದದ್ದರು. ಕೊರಿಂಥ ಸಭೆಯ ವಿಶ್ವಾಸಿಗಳಿಗೆ ನೆರೆಹೊರೆಯವರ, ಸ್ನೇಹಿತರ, ಮತ್ತು ಕುಟುಂಬಗಳ ಮೂಲಕ ವಿಗ್ರಹಗಳಿಗೆ ಸಮರ್ಪಿಸಿದ ಆಹಾರವನ್ನು ಉಣ್ಣಬೇಕು ಎಂದು ಹೇರಿದ ಒತ್ತಡ ಬಲವಾಗಿಯೂ ಮತ್ತು ದೃಢವಾಗಿಯೂ ಇತ್ತು.

ವಿಗ್ರಹಾರಾಧಕರು ದೇವರುಗಳಿಗೆ ಅರ್ಪಿಸಿದ ಮಾಂಸವನ್ನು ತಿನ್ನಬೇಕೋ ಅಥವಾ ತಿನ್ನಬಾರದೋ ಎಂಬ ಪ್ರಶ್ನೆಯನ್ನು ಎದುರಿಸುವಲ್ಲಿ ಹಿಂದಿನ ಕ್ರೈಸ್ತರು ಮಾಡಿರುವ ಸಂಘರ್ಷಣೆ ಈ ದಿನದಲ್ಲಿ ಅನೇಕ ಜನರಿಗೆ ಅರ್ಥವಾಗಿಲ್ಲ. ಇತ್ತೀಚೆಗೆ ವಿಗ್ರಹಾರಾಧನೆಯ ತಮ್ಮ ಜೀವಿತವನ್ನು ತೊರೆದುಬಿಟ್ಟಿರುವ ಸಹೋದರರು, ಅಂತರ್ಗತವಾಗಿ ದೇವರುಗಳನ್ನು ಆರಾಧಿಸುವ ಸನ್ನಿವೇಶಗಳನ್ನು ಹೆಚ್ಚು ಅಥವಾ ಕಡಿಮೆ ದಿನವೂ ಎದುರಿಸುತ್ತಿದ್ದಾರೆ. ಈ ಕೆಳಗಿನ ನಾಲ್ಕು ದೃಶ್ಯಗಳಲ್ಲಿ ಪೌಲನ ಮಾತುಗಳನ್ನು, ಇಂದಿನ ಓದುಗರು ಪೌಲನ ಕಾಲದಲ್ಲಿ ಕೊರಿಂಥದಲ್ಲಿದ್ದ ಸಾಂಸ್ಕೃತಿಕ ಮತ್ತು ಧಾರ್ಮಿಕ ಸನ್ನಿವೇಶವನ್ನು ಕಲ್ಪಸಿಕೊಳ್ಳಲು ಅವಕಾಶಕೊಡುವದರ ಮೂಲಕ ಹೆಚ್ಚು ಸಮಗ್ರವಾಗಿ ಅರ್ಥೈಸಿಕೊಳ್ಳಲಿಕ್ಕಾಗುವದಕ್ಕೆ ಸಹಾಯವಾಗುವಂತೆ ಪ್ರಸ್ತುತಪಡಿಸಲಾಗಿದೆ.

*ವ್ಯವಹಾರಕ್ಕಾಗಿ ಕೂಡಿಬರುವ ಕೂಟದಲ್ಲಿ ಮಾಂಸವನ್ನು ತಿನ್ನುವದು.* ಮೊದಲು ನಾವು ಕುಶಲಕರ್ಮಿಯನ್ನು, ಒಂದು ವೇಳೆ ಕಮ್ಮಾರನನ್ನು ಕಲ್ಪಸಿಕೊಳ್ಳಬಹುದು. ಆತನು ತನ್ನ ವೃತ್ತಿಯನ್ನು ತನ್ನ ತಂದೆಯಿಂದ ಕಲಿತನು ಮತ್ತು ಹೆಚ್ಚು ಕಾಲ ಲ್ಯಾಟಿನ್ ಭಾಷೆ-ಮಾತನಾಡುವ ಸಂಘ ಎಂದು ಕರೆಯಲ್ಪಡಬಹುದಾದ, ಕೊರಿಂಥದ ಕಮ್ಮಾರ ಸಂಘವನ್ನು ಸೇರಿದನು. ಅವನು ಮತ್ತು ಇತರ ಕಮ್ಮಾರರು ನಿಯತಕಾಲಿಕವಾಗಿ ಅನ್ಯೋನ್ಯತೆಗಾಗಿ, ಮಾರುಕಟ್ಟೆಗಳ ಅಥವಾ ಕಚ್ಚಾ-ವಸ್ತುಗಳ ಪೂರೈಕೆಯ, ಮತ್ತು ತಮ್ಮ ವ್ಯವಹಾರಕ್ಕೆ ಅನುಕೂಲಕರವಾದ ಕಾರ್ಯ ನೀತಿಗಳಿಗೋಸ್ಕರ ಸರಕಾರದ ಎಲ್ಲಾ ಮಟ್ಟದಲ್ಲಿ ಬೀರುವ ಪ್ರಭಾವವನ್ನು ಕುರಿತು ಹಂಚಿಕೊಳ್ಳಲು ಕೂಡಿ ಬರುತ್ತಿದ್ದರು.

ಈ ಕಮ್ಮಾರ ಸಂಘದ ಒಕ್ಕೂಟವು ಕೂಡಿ ಬರುವ ಊಟದ ಕೋಣೆಯು ಲೋಹವಿದ್ಯೆಯ ದೇವರಿಗೆ ಮುಡಿಪಾಗಿಟ್ಟ ದೇವಸ್ಥಾನದ ಸುತ್ತುಮುತ್ತಲಿನಲ್ಲಿತ್ತು. ಅವನು ಗ್ರೀಕರಿಗೆ “Hephaestus” ಆಗಿದ್ದನು, ಆದರೆ ಅವನು ರೋಮನರಿಗೆ “Vulcan” ಯಾಗಿದ್ದನು. ಕಮ್ಮಾರ ಸಂಘದ ಕೂಟದ ಮೊದಲು, ಒಂದು ಮೇಕೆ ಅಥವಾ ಒಂದು ಹಂದಿಯನ್ನು ದೇವರಿಗೆ ಸಮರ್ಪಿಸುತ್ತಿದ್ದರು. ಅದರ ಕೊಬ್ಬಿನ ಭಾಗವನ್ನು ವೇದಿಯ ಮೇಲೆ ಸುಡುತ್ತಿದ್ದರು, ಮತ್ತು ಪ್ರಾಣಿಯ ಮಾಂಸವನ್ನು ಒಕ್ಕೂಟಕ್ಕೋಸ್ಕರ ಕೊಡುತ್ತಿದ್ದರು. ಕೂಟವು ದೇವರ ಅನುಗ್ರಹಕ್ಕೆ ಮೊರೆಯಿಡುವ ಧರ್ಮಾಚರಣೆಯೊಂದಿಗೆ ಪ್ರಾರಂಭವಾಗುತ್ತಿತ್ತು. ಬಹುಮಟ್ಟಿಗೆ ಕಮ್ಮಾರರು ದೇವತೆಗೆ ಸ್ವಲ್ಪ ಕಲ್ಪನೆಯನ್ನು ನೀಡುತ್ತಿದ್ದರು, ಆದರೆ ಬಹುಶಃ ಪ್ರತಿದಿನದಲ್ಲಿ ಬದುಕುಳಿಯುವ ವಿಷಯಕ್ಕ ಅಲೌಕಿಕ (ಅಸಾಧಾರಣ ಶಕ್ತಿಯ) ಸಹಾಯವಿದ್ದರೆ ಸೊಗಸಾಗಿತ್ತು ಎಂಬುದು ಬಹುಮಟ್ಟಿನ ವಿಚಾರವಾಗಿತ್ತು. ಅವನಿಗೆ ಕಮ್ಮಾರ ಸಂಘದ ಸಾಮುದಾಯಿಕ ಧ್ವನಿಯ ಮೂಲಕ ತನ್ನ ವ್ಯವಹಾರಕ್ಕೋಸ್ಕರ ಪಡೆದುಕೊಳ್ಳುವ ಅನೇಕ ಲಾಭಗಳ ಬಗ್ಗೆ ಅವನಿಗೆ ತಿಳಿದಿತ್ತು. ಇತ್ತೀಚೆಗೆ ಅವನು ಕ್ರೈಸ್ತನಾಗಿದ್ದನು. ಅವನು ಕಮ್ಮಾರ ಸಂಘದ ಸದಸ್ಯತ್ವಕ್ಕಾಗಿ ತಾನು ಈಗಷ್ಟೇ ಕಂಡುಕೊಂಡ ನಂಬಿಕೆಯ ಜಟಿಲತೆಳನ್ನು ವಿಂಗಡಿಸುವ ಪ್ರಕ್ರಿಯೆಯಲ್ಲಿದ್ದನು. ಪ್ರಶ್ನೆಗಳು ಹುಟ್ಟಿಕೊಂಡಿದ್ದವು, ಯಾಕಂದರೆ ಅವನಿಗೆ

ಸಂಬಂಧಿಸಿದ್ದ ಸಂಘವು “ದೇವತೆಯೊಂದಿಗೆ, ಮೇಲಿಂದ ಮೇಲೆ ದೇವಸ್ಥಾನದಲ್ಲಿ ಭೇಟಿಯಾಗುವ, ಮಧ್ಯತರ್ಪಣ ಮತ್ತು ಬಲಿದಾನಗಳನ್ನು ನೈವೇದ್ಯ ಮಾಡುವ ಮತ್ತು ವಿಗ್ರಹಾಲಯಗಳಿಂದ ಮಾಂಸವನ್ನು ತಿನ್ನುವದರೊಂದಿಗೆ ಸಂಯೋಜಿಸಲ್ಪಟ್ಟಿತ್ತು.”[1] ಅವನು ಇಕ್ಕಟ್ಟಿನಲ್ಲಿದನ್ನು, ತನ್ನನ್ನು ತಾನು ಕಮ್ಮಾರ ಸಂಘದಿಂದ ಬೇರ್ಪಡಿಸಿದರೆ ಗಂಭೀರವಾದ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳನ್ನು ಹೊಂದ ಬಹುದಾಗಿತ್ತು.

ಭೌದ್ಧಿಕವಾಗಿ ಕಮ್ಮಾರನು Hephaestus ಏನೂ ಅಲ್ಲ ಎಂಬುದನ್ನು ಅರಿತುಕೊಂಡನು; ಆದರೆ ಅನೇಕ ವರ್ಷಗಳ ಸಾಂಸ್ಕೃತಿಕ ಸ್ಥಿತಿ ವಿಗ್ರಹಾರಾಧಕರ ದೇವತೆಗಳ ಸಂಪರ್ಕದೊಂದಿಗೆ ಆಚರಣೆಗಳನ್ನು ವಿಸರ್ಜಿಸುವದಕ್ಕೆ ಅವನಿಗೆ ಕಷ್ಟಕರವಾಗಿತ್ತು. ಪೌಲನಿಗೆ ಅವನ ಪ್ರಶ್ನೆಯು ಇದಾಗಿತ್ತು: ಇದು ಒಳ್ಳೆಯ ವ್ಯವಹಾರದ ವಿಷಯವಾದಾಗ, ತಂದೆಯಾದ ದೇವರಿಗೆ ಮತ್ತು ಕರ್ತನಾದ ಯೇಸು ಕ್ರಿಸ್ತನಿಗೆ ಸ್ನೇಹಿತರಿರಲಿಲ್ಲ ಎಂದು ಅವನು ಅಂದಿನಿಂದ ಅರಿತಿದ್ದನು, ಅವನು ಆ ವಿಗ್ರಹಾಲಯದಲ್ಲಿ ವಿಗ್ರಹಕ್ಕೆ ಅರ್ಪಿಸಿದ ಮಾಂಸವನ್ನು ತಿನ್ನಬಹುದೋ? ವಿಗ್ರಹವು ಏನೂ ಅಲ್ಲ, ಇತರರು ಸಹ ಏನೂ ಮಾಡವದಿಲ್ಲ ಎಂಬುದು ಅವನಿಗೆ ಗೊತ್ತಿತ್ತು. ಅವನ ಸ್ನೇಹಿತರೊಂದಿಗಿನ ಸಂಪರ್ಕವನ್ನು ಅವನು ಮುರಿದುಕೊಳ್ಳುವ ಅಗತ್ಯವಿದೆಯೋ?

*ಸಾಮಾಜಿಕ ಕೂಟದಲ್ಲಿ ಮಾಂಸವನ್ನು ತಿನ್ನುವದು.* ಎರಡನೆಯ ದೃಶ್ಯವು ಒಬ್ಬ ಸ್ತ್ರೀಯು ತನ್ನ ನಾಲ್ವತ್ತನೆಯ ವರ್ಷವನ್ನು ಹೊಂದಿರಬಹುದಾಗಿದ್ದು ಇನ್ನು ಮುಂದೆ ಮಕ್ಕಳು ಅವಳ ಎಲ್ಲ ಸಮಯವನ್ನು ತೆಗೆದುಕೊಳ್ಳುವದನ್ನು ಒಳಗೊಂಡಿದೆ. ಕಳೆದ ಕೆಲವು ವರ್ಷಗಳಲ್ಲಿ, ಅವಳು ಕೊರಿಂಥದ ಇತರ ಸ್ತ್ರೀಯರೊಂದಿಗೆ (ಧಾನ್ಯಗಳ ದೇವತೆ) ಮತ್ತು ಅವಳ ಪೌರಾಣಿಕ ಮಗಳಾದ ಇವರಿಗೆ ಮೀಸಲಾಗಿಟ್ಟ ದೇವಸ್ಥಾನದಲ್ಲಿ ನಿಯತಕಾಲಿಕವಾಗಿ ಗುಂಪುಗೂಡುತ್ತಿದ್ದಳು. ಇಬ್ಬರೂ ಕೃಷಿಸಂಬಂಧಿ ದೇವರುಗಳು, ಇವರಿರ್ವರಿಗೂ ಸ್ತ್ರೀಯರೆಡೆಗೆ ಹೆಚ್ಚಿನ ಒಲವಿದೆ ಎಂದು ನಂಬಲಾಗಿತ್ತು. ಇವು ಸಂದರ್ಭಕ್ಕೆ ಸಂಬಂಧಿಸಿದ ಸಾಮಾಜಿಕ ಕೂಟಗಳಾಗಿದ್ದವು. ಕೆಂಡದ (ಇದ್ದಿಲಿನ ಸಣ್ಣ ಉರಿಯ) ಮೇಲೆ ತಯಾರಿಸಿದ ಊಟವನ್ನು ಸಂಪ್ರದಾಯಿಕವಾಗಿ ದೇವತೆಗೆ ಸಮರ್ಪಿಸುವದಕ್ಕಾಗಿ ಸ್ತ್ರೀಯರು ತಮ್ಮೊಟ್ಟಿಗೆ ತೆಗೆದುಕೊಂಡು ಬರುತ್ತಿದ್ದರು, ಅಲ್ಲದೇ ತಾವು ಮನೆಯಲ್ಲಿ ಎದುರಿಸುತ್ತಿರುವ ಯಾವುದೇ ಸಂಘರ್ಷದ ವಿಷಯಕ್ಕೆ (ಧಾನ್ಯಗಳ ದೇವತೆ) ನ ಸಹಾಯವನ್ನು ಯಾಚಿಸುತ್ತಿದ್ದರು ಮತ್ತು ಮನೆಯ ಕೆಲಸಗಳಿಂದ ಸ್ವಲ್ಪ ಸಮಯ ದೂರವಿದ್ದು ಸಂತೋಷಪಡುತ್ತಿದ್ದರು.

ಹಾಗೆಯೇ ಈ ಸ್ತ್ರೀಯು ಇತ್ತೀಚೆಗೆ ಕ್ರಿಸ್ತನನ್ನು ಒಪ್ಪಿಕೊಂಡು ಮತ್ತು ದಿಕ್ಷಾಸ್ನಾನದಲ್ಲಿ ಆತನನ್ನು ಅಂಗೀಕರಿಸಿ ಆತನಿಗೆ ವಿಧೇಯಳಾಗಿದ್ದಳು. ಆಕೆಯ ಸ್ನೇಹಿತರೊಂದಿಗಿನ ಆಕೆಯ ಸಹವಾಸವು ಕಮ್ಮಾರನಂತೆ ಇರಲಿಲ್ಲ, ಆದರೆ ಆಕೆಯಲ್ಲಿಯೂ ಅದೇ ರೀತಿಯಾದ ಪ್ರಶ್ನೆಗಳಿದ್ದವು ಎಂಬುದರಲ್ಲಿ ಸಂಶಯವಿರಲಿಲ್ಲ. ಅವಳು ವಿಗ್ರಹವಿರುವ ದೇವಸ್ಥಾನಕ್ಕೆ ಹೋಗಿ ವಿಗ್ರಹಕ್ಕೆ ಸಮರ್ಪಿಸಿದ ಊಟವನ್ನು ಹಂಚಿಕೊಳ್ಳುವದರಲ್ಲಿ ತಾನು ಕ್ರಿಸ್ತನನ್ನು ಒಪ್ಪಿಕೊಂಡದ್ದನ್ನು ಸಂಧಾನ ಮಾಡಿಕೊಳ್ಳುವದು ಸಾಧ್ಯವಿತ್ತೋ? ಈಗ ಆಕೆಯು ಕ್ರೈಸ್ತಳಾಗಿದ್ದಳು, ವಿಗ್ರಹಕ್ಕೆ ಏನೂ ಅರ್ಥವಿಲ್ಲ ಎಂಬುದನ್ನು ಆಕೆಯು ತಿಳಿದುಕೊಂಡಿದ್ದಳು. ಇನ್ನು ಮುಂದೆ ಯಾಕೆ ತನ್ನ ಸ್ನೇಹಿತೆಯರನ್ನು ಭೇಟಿಯಾಗುವುದಿಲ್ಲ ಎಂಬುದನ್ನು ಅವರಿಗೆ ಹೇಗೆ ವಿವರಿಸುವುದು ಎಂಬುದರ ಕುರಿತು ವಿಸ್ಮಯಗೊಂಡಿದ್ದಳು. ಕ್ರಿಸ್ತನನ್ನು ಒಪ್ಪಿಕೊಂಡರೆ

ತನ್ನ ಜೀವಮಾನದ ಸ್ನೇಹಿತರಿಂದ ತನ್ನನ್ನು ತಾನು ಬೇರ್ಪಡಿಸುವ ಅವಶ್ಯಕತೆಯಿದೆಯೋ ಎಂದು ಪೌಲನನ್ನು ಕೇಳಲು ಬಯಸುವವಳಾಗಿದ್ದಿರಬಹುದು.

*ಮನೆಯಲ್ಲಿ ಮಾಂಸವನ್ನು ತಿನ್ನುವದು.* ಮೂರನೆಯ ಸಂಗತಿಗಾಗಿ ನಾವು ಮನೆಯಲ್ಲಿ ಮಾಂಸವನ್ನು ತಿನ್ನಲು ಬಯಸುವ ಒಂದು ಕುಟುಂಬವನ್ನು ಪರಿಗಣಿಸೋಣ. ಕೊರಿಂಥದಲ್ಲಿ ಆ ಸಮಯದಲ್ಲಿ ಕ್ರಮಬದ್ಧವಾದ ಊಟಗಳಿಗಾಗಿ ಮಾಂಸವು ವಿರಳವಾಗಿತ್ತು, ಆದರೆ ವಿಶೇಷ ಸಂದರ್ಭಗಳಲ್ಲಿ ಕುಟುಂಬವು ಮಾಂಸದ ಮಾರುಕಟ್ಟೆಯೊಳಗೆ (μάκελλον, *makellon*; 10:25) ಹೋಗಿ ಏನಾದರೂ ಕೊಂಡು ಕೊಳ್ಳಲು ಬಹುಶಃ ಧೈರ್ಯಮಾಡುತ್ತಿದರು. ಮಾರುಕಟ್ಟೆಯ ಸ್ಥಳದಲ್ಲಿ ಹೆಚ್ಚಾದ ಮಾಂಸವು ವಿಗ್ರಹಾರಾಧಕರ ದೇವರುಗಳ ದೇವಸ್ಥಾನಗಳ ಮೂಲಕ ಪೂರೈಕೆಯಾಗುತ್ತಿತ್ತು. ದೇವರ ಸಹಾಯದ ಅವಶ್ಯವಿರುವ ವಿಗ್ರಹಾರಾಧಕರು ದೇವರ ದೇವಸ್ಥಾನಕ್ಕೆ ಆಡು, ಹಂದಿ ಅಥವಾ ಹೋರಿಯನ್ನು ಸಹ ಉಡುಗೊರೆಯಾಗಿ ತರಬಹುದಾಗಿತ್ತು. ಪಶುವನ್ನು ವಧಿಸಿ, ಕೊಬ್ಬಿನ ಭಾಗಗಳನ್ನು ವೇದಿಯ ಮೇಲೆ ಸುಡುತ್ತಿದ್ದರು, ಮತ್ತು ಉಳಿದ ಮಾಂಸವನ್ನು ಮಾರುಕಟ್ಟೆ ಸ್ಥಳಕ್ಕೆ ತೆಗೆದುಕೊಂಡು ಹೋಗುವ ವ್ಯಾಪಾರಸ್ಥರಿಗೆ ಮಾರಾಟ ಮಾಡುತ್ತಿದ್ದರು. ಕೊರಿಂಥದವರು ಪೌಲನಿಗೆ ಹಾಕಿದ ಪ್ರಶ್ನೆ ಇದು: ಮುಂಚಿತವಾಗಿ ವಿಗ್ರಹಕ್ಕೆ ಸಮರ್ಪಿಸಿದ ಮಾಂಸವನ್ನು ಕ್ರೈಸ್ತರು ಕುಟುಂಬದ ಊಟದ ಮೇಜಿನ ಮೇಲೆ ಬಡಿಸಬಹುದೋ?

*ಸ್ನೇಹಿತರ ಮನೆಯಲ್ಲಿ ಮಾಂಸವನ್ನು ತಿನ್ನುವದು.* ನಾಲ್ಕನೆಯ ಪರಿಸ್ಥಿತಿ ಮೂರನೆಯ ಪರಿಸ್ಥಿತಿಗೆ ಹೋಲಿಕೆಯಾಗಿದೆ, ಆದರೆ ಇದು ಇತರ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಯಾರಾದರೂ ಬೇರೊಬ್ಬರ ಮನೆಯಲ್ಲಿ ತಿನ್ನುವ ದೃಶ್ಯವನ್ನು ಇದು ಒಳಗೊಂಡಿದೆ. ಒಂದು ವೇಳೆ, ಬಹುಶಃ ಕ್ರೈಸ್ತೇತರ ಕುಟುಂಬದ ಸದಸ್ಯರುಗಳು, ಕ್ರೈಸ್ತರನ್ನು ತಮ್ಮೊಂದಿಗೆ ಊಟಮಾಡುವಂತೆ ಆಮಂತ್ರಣವನ್ನು ನೀಡಿರಬಹುದೋ ಏನೋ? ಕ್ರೈಸ್ತರು ಈ ಆಮಂತ್ರಣವನ್ನು ಒಪ್ಪಿಕೊಳ್ಳಬಹುದು ಮತ್ತು ಭೋಜನದಲ್ಲಿ ಬಡಿಸಿದ ಮಾಂಸವು ಬಹುಮಟ್ಟಿಗೆ ವಿಗ್ರಹಾರಾಧಕರ ದೇವರಿಗೆ ಸಮರ್ಪಿಸಿದ್ದೋ? ಎಂಬ ಸಂಶಯದಲ್ಲಿ ತಿನ್ನಬಹುದು. ಕ್ರೈಸ್ತರ ಪ್ರಭಾವ, ಅಲ್ಲದೇ ದೇವರ ಕಡೆಗಿರುವ ಅವರ ನಂಬಿಕೆ ಒಂದು ಸಮಸ್ಯೆಯಾಗುತ್ತದೆ.

*ಸಾರಾಂಶ:* ವಿಗ್ರಹಗಳಿಗೆ ಸಮರ್ಪಿಸಿದ ಮಾಂಸವನ್ನು ತಿನ್ನುವ ಕುರಿತು ಪ್ರಶ್ನೆಗಳು - ನಿರ್ದಿಷ್ಟದಲ್ಲಿ, ವಿಗ್ರಹಾಲಯದಲ್ಲಿ ಮಾಂಸವನ್ನು ತಿನ್ನುವುದು - ಸೂಕ್ಷ್ಮ ಮತ್ತು ಸೂಕ್ಷ್ಮ ವ್ಯತ್ಯಾಸಗಳು. ಇಂಥಹ ಪರಿಸ್ಥಿತಿಗಳಲ್ಲಿ ಸರಳವಾಗಿ "ಹೌದು" ಅಥವಾ "ಇಲ್ಲ," "ಸರಿ" ಅಥವಾ "ತಪ್ಪು" ಇವು ಪೌಲನು ಕೊಟ್ಟ ಉತ್ತರಗಳಾಗಿರಲಿಲ್ಲ. ಹೊಸ ವಿಶ್ವಾಸಿಗಳಿಗೆ ಇನ್ನೂ ಸ್ಪಷ್ಟವಾದ ಸೂಚನೆಗಳ ಅವಶ್ಯಕತೆಯಿತ್ತು. ಪ್ರೇರೆಪಣೆಯನ್ನು ಹೊಂದಿದ ಅಪಸ್ತಲನು ಸಂಬಂಧಪಟ್ಟ ಕ್ಷೇತ್ರಗಳಲ್ಲಿ ದೇವರು ನಿರ್ಧಿಷ್ಟವಾದ ಆಜ್ಞೆಯನ್ನು ನೀಡದೇ ಇರುವ ಕ್ಷೇತ್ರಗಳಲ್ಲಿ, ಅವನು ಎಚ್ಚರಿಕೆಯ ವಿವೇಚನೆಯ ಮೇಲೆ ಅವಲಂಭಿತನಾಗಿದ್ದನು. ಖಂಡಿತವಾಗಿಯೂ, ಅವನು ಕ್ರೈಸ್ತರಿಗೆ ವಿಗ್ರಹಾರಾಧನೆಯನ್ನು ಬಿಟ್ಟು ಬಿಡಬೇಕೆಂದು ಒತ್ತಿ ಹೇಳುತ್ತಿದ್ದನು, ಮತ್ತು ವಿಗ್ರಹಾಲಯಗಳಿಂದ ದೂರವಿರಬೇಕೆಂದು ಅದರ ಅರ್ಥ. ತಾವು ವಿಗ್ರಹಾರಾಧಕರ ಆಚರಣೆಯಲ್ಲಿ ಭಾಗವಹಿಸುತ್ತಿದ್ದೇವೆಂಬ ಆಲೋಚನೆ ತಮಗೆ ಬರಬಾರದೆಂದು, ಅವರು ತಮ್ಮ ಸುತ್ತಮುತ್ತ ಜನರು ಇರುವಂತೆ ಅನುಮತಿಸುತ್ತಿರಲಿಲ್ಲ.

ಮಾರುಕಟ್ಟೆಯ ಸ್ಥಳದಲ್ಲಿ ಖರೀದಿಗೆ ಸಂಬಂಧಿಸಿದಂತೆ, ಮಾಂಸದ ತುಂಡಿನ ಹಿಂದಿರುವ ಚರಿತ್ರೆಯ ಕುರಿತು ಕೇಳುವದನ್ನು ಬಹಳ ಜಾಣತನದಿಂದ ತಪ್ಪಿಸಿಕೊಳ್ಳುತ್ತಿದ್ದರು. ಒಂದು ವೇಳೆ ಊಟಕ್ಕೆ ಬಡಿಸಿದ ಮಾಂಸವು ವಿಗ್ರಹಕ್ಕೆ ನೈವೇದ್ಯ ಮಾಡಿದ್ದು ಎಂದು ಹೇಳುವದರ ಮೂಲಕ ಯಾರಾದರೂ ಗಮನ ಸೆಳೆದರೆ, ಆಗ ಕ್ರೈಸ್ತನು ತಾನು ಅದನ್ನು ತಿನ್ನುವದು ಸರಿಯಾಗಿದೆ ಎಂದು ಮೊದಲೇ ಹೇಳುವದರ ಮೂಲಕ ವಿಗ್ರಹಾರಾಧನೆಯ ವಿರುದ್ಧವಾಗಿ ಸ್ಪಷ್ಟವಾದ ಸಮರ್ಥನೆಯನ್ನು ಮಾಡಬೇಕಾಗಿತ್ತು.

## ಜ್ಞಾನ ಪ್ರತಿ ಪ್ರೀತಿ (8:1-3)

**[1]ವಿಗ್ರಹಕ್ಕೆ ನೈವೇದ್ಯಮಾಡಿದ ಪದಾರ್ಥಗಳ ವಿಷಯದಲ್ಲಿ ಈಗ ನೋಡೋಣ ನಮ್ಮೆಲ್ಲರಿಗೆ ಜ್ಞಾನವುಂಟೆಂದು ಬಲ್ಲೆವು. ಜ್ಞಾನವು ಉಬ್ಬಿಸುತ್ತದೆ, ಪ್ರೀತಿಯು ಭಕ್ತಿವೃದ್ಧಿಯನ್ನುಂಟುಮಾಡುತ್ತದೆ. [2]ಇಂಥಿಂಥನ್ನು ತಿಳುಕೊಂಡಿದ್ದೇನೆಂದು ನೆನಸಿದವನು ತಾನು ತಿಳಿಯಬೇಕಾದ ರೀತಿಯಿಂದ ಇನ್ನೂ ತಿಳುಕೊಳ್ಳಲಿಲ್ಲ. [3]ಆದರೆ ಯಾವನು ದೇವರನ್ನು ಪ್ರೀತಿಸುತ್ತಾನೋ ಅವನನ್ನೇ ದೇವರು ತಿಳಿದುಕೊಳ್ಳುತ್ತಾನೆ.**

**ವಚನ 1.** ನಂತರ ಹೇಳುವಂತೆ, **ಈಗ ವಿಗ್ರಹಗಳಿಗೆ ನೈವೇದ್ಯ ಮಾಡಿದ ವಸ್ತುಗಳು**, ಅಪೊಸ್ತಲನು ವಿಗ್ರಹಕ್ಕೆ ನೇವೇದ್ಯ ಮಾಡಿದ ಮಾಂಸದ ಕುರಿತಾದ ತನ್ನ ಆಭಿಪ್ರಾಯವನ್ನು ಮೃದುವಾದ ಖಂಡನೆಯೊಂದಿಗೆ ಬಿಚ್ಚಿಟ್ಟನು. ಇದು ಆತನಿಗೆ ಪ್ರಶ್ನೆಯನ್ನು ಹಾಕಿರುವ ಕಾರಣಕ್ಕಾಗಿ ಅಲ್ಲ, ಆದರೆ ಅವರ ಹಿಂದಿರುವ ವರ್ತನೆಯ ಕಾರಣಕ್ಕಾಗಿ. ವಾದವಿವಾದವು ಜ್ಞಾನದ ಮೇಲೆ ಕೇಂದ್ರಿಕೃತವಾಗಿತ್ತು. ವಿಗ್ರಹಾಲಯದಲ್ಲಿ ವಿಗ್ರಹಕ್ಕೆ ನೈವೇದ್ಯ ಮಾಡಿದ ಮಾಂಸವನ್ನು ಸೇವಿಸಿದವರು ತಮ್ಮ ತಿಳುವಳಿಕೆಯು ತಮ್ಮ ನಡತೆಯನ್ನು ಸಮರ್ಥಿಸುತ್ತದೆ ಎಂದು ನಂಬಿದ್ದರು. ಸಾರ್ವಜನಿಕ ಊಟದ ಕೋಣೆಗಳು ದೇವಸ್ಥಾನದ ಸುತ್ತಮುತ್ತಲು ಲಭ್ಯವಿರುತ್ತಿದ್ದವು.[2] ಈ ಔತಣದಲ್ಲಿ ಭಾಗವಹಿಸಿದ ಕ್ರೈಸ್ತರು, ಈ ಪ್ರದೇಶದಲ್ಲಿ ತಿನ್ನುತ್ತಿರುವ ಅವರು ವಿಗ್ರಹಗಳನ್ನು ಆರಾಧಿಸುವದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿ ಕಾಣುತ್ತಿದ್ದರು. ವಿಗ್ರಹಗಳು ಏನೂ ಅಲ್ಲ ಎಂಬುದು ಅವರಿಗೆ ತಿಳಿದಿತ್ತು ಆ ನಿಮಿತ್ತದಿಂದ ಅವರು ಈ ಅಸ್ತಿತ್ವವಿಲ್ಲದ ದೇವರುಗಳಿಗೆ ನೈವೇದ್ಯ ಮಾಡಿದ ಮಾಂಸವನ್ನು ತಿನ್ನುವದರಲ್ಲಿ ಯಾವುದೇ ನಷ್ಟವಿಲ್ಲ ಎಂದು ಅವರು ಗ್ರಹಿಸಿದ್ದರು.

ಪೌಲನು ಇದನ್ನು ಒಪ್ಪಲಿಲ್ಲ. **ನಮಗೆ ಗೊತ್ತಿದೆ, ನಮ್ಮೆಲ್ಲರಿಗೆ ಜ್ಞಾನವಿದೆ** ಎಂದು ಅವನು ಬರೆದನು. ಅವನು ಉಲ್ಲೇಖಿಸಿದ "ಜ್ಞಾನವು" ಪ್ರಾಪಂಚಿಕ ವಿವೇಕ, ಇದರ ಕುರಿತು ಅವನು ಈ ಮೊದಲೇ 1:21 ಮತ್ತು 2:1-13ರಲ್ಲಿ ಮಾತನಾಡಿದ್ದನು. ಕೊರಿಂಥದವರು "ವಿವೇಕವು" ಮತ್ತು "ಜ್ಞಾನವು" ಇವುಗಳನ್ನು ತಮ್ಮದೇ ಎಂದುಕೊಂಡಿದ್ದರು, ಪೌಲನು ಇದು "ಅಹಂಕಾರದ" ಕಡೆಗೆ ನಡೆಸುತ್ತದೆ ಎಂದು ಹೇಳಿದ್ದನು (4:18, 19 ನೋಡಿರಿ). ಹೊಸ ಒಡಂಬಡಿಕೆಯಲ್ಲಿನ ಏಳು ಘಟನೆಗಳಲ್ಲಿ ಕ್ರಿಯಾಪದವು φυσιόω (*phusioō*, "ಅಹಂಕಾರದ ನಿಮಿತ್ಯ"; ಅಕ್ಷರಶಃ "ಉಬ್ಬಿಕೊಳ್ಳುವದು"), ಅವುಗಳಲ್ಲಿ ಆರು 1 ಕೊರಿಂಥ ದವರಿಗೆ ಬರೆದ ಪತ್ರಿಕೆಯಲ್ಲಿವೆ. ಪೌಲನು ಖಂಡಿಸಿದ "ಜ್ಞಾನ"ವನ್ನು ಕೆಲವರು ವಿಗ್ರಹಾರಾಧನೆಯ ಆಚರಣೆಯನ್ನು ಮುಂದುವರೆಸುವದನ್ನು ಸಮರ್ಥನೆ ಮಾಡಿ

ಕೊಳ್ಳುವಲ್ಲಿ ಉಪಯೋಗಿಸಿಕೊಂಡರು.[3]

ಜ್ಞಾನವು ಅಹಂಕಾರಿಯನ್ನಾಗಿಸುತ್ತದೆ, **ಪ್ರೀತಿಯು ಭಕ್ತಿಯನ್ನು ವೃದ್ಧಿಸುತ್ತದೆ** ಎಂಬ ಅಪೊಸ್ತಲರ ಅವಲೋಕವು ಕೊರಿಂಥದವರು ಪ್ರೀತಿಯನ್ನು ಉಪೇಕ್ಷೆ ಮಾಡಿ ಜ್ಞಾನದಲ್ಲಿ ಪ್ರವೀಣತೆಯನ್ನು ಪಡೆಯಲು ತಮ್ಮನ್ನು ತಾವು ಅರ್ಪಿಸಿಕೊಂಡಿರುವದನ್ನು ಸೂಚಿಸುತ್ತದೆ. ಇಬ್ಬರ ಮಧ್ಯದಲ್ಲಿರುವ ಪ್ರೀತಿ ಮತ್ತು ಜ್ಞಾನ ಮತ್ತು ಸಂಬಂಧವು ಅಪೊಸ್ತಲರ ಬೋಧನೆಯ ಮೂಲ ವಿಷಯವಾಗಿದೆ. ಏನೇ ಆದರೂ ಯೇಸುವನ್ನು ಕ್ರಿಸ್ತನೆಂದು ಒಪ್ಪಿಕೊಂಡವರಿಗೆ ವಿಗ್ರಹಾರಾಧನೆ ಯಾವುದೇ ರೂಪದಲ್ಲಿ ಅಸಹನೀಯವಾದದ್ದು ಎಂದು ಅವನು ತನ್ನ ಚರ್ಚೆಯಲ್ಲಿ ಕೊನೆಯವರೆಗೂ ಒತ್ತಿ ಹೇಳಿದ್ದಾನೆ. ಕ್ರೈಸ್ತರು ಇನ್ನು ಮುಂದೆ, David E. Garland ಹೇಳಿದಂತೆ, “ವಿಗ್ರಹಾಲಯಗಳಲ್ಲಿ ಆರಾಧಿಸುವದು, ವಿಗಹ್ರದ ಹಬ್ಬಗಳಲ್ಲಿ ಭಾಗವಹಿಸುವದು, ಅಥವಾ ವಿಗ್ರಹದ ಔತಣಕೂಟದಲ್ಲಿ[4] ಊಟ ಮಾಡುವದು” ಮಾಡಬಾರದು ಎಂದು ಪೌಲನು ಸಂಪೂರ್ಣವಾಗಿ ನಿರೀಕ್ಷಿಸಿದ್ದನ್ನು ಸ್ಪಷ್ಟಪಡಿಸುತ್ತದೆ.

ವಿಗ್ರಹಾರಾಧನೆಯೊಂದಿಗೆ ಸಂಧಾನಮಾಡಿಕೊಂಡವರನ್ನು ಪೌಲನು ದೃಢವಾಗಿ ಖಂಡಿಸಿದ್ದಾನೆ. ಜ್ಞಾನದಲ್ಲಿ ತಮ್ಮನ್ನು ತಾವು ಸಾಮರ್ಥ್ಯವುಳ್ಳವರು, ವಿಗ್ರಹಗಳಿಗೆ ನೇವೇದ್ಯ ಮಾಡಿದ ಊಟವನ್ನು ಅವರು ತಿಂದ ಹಾಗೇ ಅದು ಪಾಪ ಮಾಡದಂತೆ ಅವರನ್ನು ರಕ್ಷಿಸುತ್ತದೆ ಎಂದು ಕ್ರೈಸ್ತರು ಊಹಿಸಿಕೊಂಡಿದ್ದರು ಅವನು ಪ್ರಶಂಸೆ ಮಾಡಲಿಲ್ಲ. ಪೌಲನು ಬಲಶಾಲಿ ಕ್ರೈಸ್ತರ ಮತ್ತು ಬಲಹೀನ ಕ್ರೈಸ್ತರ ಮಧ್ಯದಲ್ಲಿನ ಭಿನ್ನಾಭಿಪ್ರಾಯಗಳನ್ನು ನಿರ್ಣಯಿಸಲಿಲ್ಲ. ಅವನು ಪ್ರತಿಯೊಬ್ಬರೂ ವಿಗ್ರಹಾರಾಧನೆಯನ್ನು ಬಿಟ್ಟು ಬಿಡಬೇಕೆಂದು ಬುದ್ಧಿ ಹೇಳುತ್ತಿದ್ದನು.

ಅಪೊಸ್ತಲರು 8:7-13ರಲ್ಲಿ ಬಲಹೀನ ಕ್ರೈಸ್ತರ ಕುರಿತು ಪ್ರಸ್ತಾಪಿಸಿದಾಗ, ಅವನು ಅವರನ್ನು ವಿಶ್ವಾಸಿಗಳೆಂದು ಮತ್ತು ಒಂದು ವೇಳೆ ಅವರು ತಮ್ಮ ಸಹ-ಕ್ರೈಸ್ತರು ವಿಗ್ರಹಾಲಯದಲ್ಲಿ ವಿಗ್ರಹಕ್ಕೆ ನೈವೇದ್ಯ ಮಾಡಿದ ಮಾಂಸವನ್ನು ತಿನ್ನುವದನ್ನು ನೋಡಿದಾಗ ಅವರ ನಂಬಿಕೆಯು ಅಸ್ಥಿರತೆಯನ್ನು ಹೊಂದಬಹುದು ಎಂದು ಗ್ರಹಿಸಿದನು. ಇಂತಹ ಒಂದು ತಪ್ಪು ನಡವಳಿಕೆಯ ಸಾಧ್ಯತೆಯ ಬಗ್ಗೆ ಪೌಲನು ಚಿಂತಿತನಾಗಿದ್ದನು (8:11 ನೋಡಿರಿ). *ಈ ಸನ್ನಿವೇಶದಲ್ಲಿ ಯಾರನ್ನೂ “ಬಲಶಾಲಿ” ಎಂದು ಕರೆಯಲಿಲ್ಲ, ಮತ್ತು ಅವನು ಯಾರಿಗೂ ವಿಗ್ರಹಾಲಯದಲ್ಲಿ ಊಟ ಮಾಡುವದಕ್ಕೆ ಅನುಮೊದೀನೆ ಕೊಡಲಿಲ್ಲ.*

ಪೌಲನ ಚರ್ಚೆಯನ್ನು ವಿವರಿಸುತ್ತಾ ಹೋದ ಹಾಗೆ ವಿಶಿಷ್ಟ ಸ್ವಭಾವದ ಅವನ ಚಿಂತನೆಗಳು ಇನ್ನೂ ಹೆಚ್ಚು ಸ್ಪಷ್ಟವಾಗುತ್ತವೆ. ವಿಗ್ರಹಗಳಿಗೆ ಅರ್ಪಿಸಿದ ಪದಾರ್ಥಗಳನ್ನು ತಿನ್ನುವದರ ಬಗ್ಗೆ ಅವನ ಅಸಮ್ಮತಿಯಿತ್ತು, ಆದರೆ ಅವನ ಈ ಅಸಮ್ಮತಿ ಒಂದು ಬಾರಿ ವಿಗ್ರಹಕ್ಕೆ ನೈವೇದ್ಯ ಮಾಡಿದ ಮಾಂಸವನ್ನು ಸೇವಿಸಿದವರ ಮೇಲೆ ಯಾವುದೇ ಪೈಶಾಚಿಕ ಶಕ್ತಿ ಬಂದಿದೆ ಎಂದು ಹೇಳುವದು ಅಲ್ಲ (10:19, 20). ಇಂತಹ ಊಟವನ್ನು ಸ್ವಂತ ಮನೆಯಲ್ಲಿ ತಿನ್ನುವದು, ಉದಾಹರಣೆಗೆ: ಎಲ್ಲಿಯವರೆಗೆ ಇದರ ಮೂಲದ ಕುರಿತು ಯಾರೂ ಗಮನವನ್ನು ಸೆಳೆಯುವುದಿಲ್ಲವೋ, ಅಲ್ಲಿಯವರೆಗೆ ಇದು ಪರಿಪೂರ್ಣವಾಗಿ ಸ್ವೀಕಾರಾರ್ಹವಾಗಿದೆ (10:27). ಪೌಲನು ಮಾಂಸವನ್ನು, ಮತ್ತು “ವಿಗ್ರಹಗಳಿಗೆ ಅರ್ಪಿಸಿದ” ಮಾಂಸವನ್ನು ತಿನ್ನುವದರ ಕುರಿತು ಸಹ ಚಿಂತಿತನಾಗಿಲ್ಲ; ಅವನು ಕೊರಿಂಥದವರು ಅಂತಹ ಊಟವನ್ನು ದೇವರಿಗೆಂದು ಮೊಸಲಾದ ವಿಗ್ರಹಾಲಯದಲ್ಲಿ ಉಣ್ಣುತ್ತಿರುವದಕ್ಕಾಗಿ

ಅವರನ್ನು ಖಂಡಿಸಿದ್ದಾನೆ (8:10). ವಿಗ್ರಹಾಲಯದಲ್ಲಿ ವಿಗ್ರಹಕ್ಕೆ ನೈವೇದ್ಯ ಮಾಡಿದ ಊಟವನ್ನು ಮಾಡುವಾಗ, ಈ ಕ್ರಿಯೆಯು ಸಹಜವಾಗಿ ವಿಗ್ರಹಾರಾಧನೆಯಾಗಿದೆ, ವಿಶ್ವಾಸಿಯ ಜ್ಞಾನ ಇಲ್ಲಿ ಗಣನೆಗೆ ಬರುವದಿಲ್ಲ.

ಕ್ರೈಸ್ತನು ವಿಗ್ರಹಾರಾಧಕ ದೇವರುಗಳನ್ನು ಅಲ್ಲಗಳೆಯಬಹುದು ಮತ್ತು ಅವನು ತಾನು ಊಟಮಾಡಿದ್ದನ್ನು "ವಿಗ್ರಹಗಳಿಗೆ ಅರ್ಪಿಸಿದ ಪದಾರ್ಥಗಳು" ಎಂದು ತಿರಸ್ಕಾರದಿಂದ ಗುರುತು ಚೀಟಿ ಹಚ್ಚಬಹುದು (εἰδωλόθυτον, *eidōlothuton*) ಏನೇ ಆದರೂ, ದೇವರಿಗೆಂದು ಮೀಸಲಾದ ವಿಗ್ರಹಾಲಯದಲ್ಲಿ ಕ್ರೈಸ್ತರ ಉಪಸ್ಥಿತಿ, ಮತ್ತು ಅವರು ವಿಗ್ರಹಕ್ಕೆ ಅರ್ಪಿತವಾದ ಆಹಾರವನ್ನು ಉಣ್ಣುತ್ತಿರುವರೆಂದು ಮತ್ತು ಇದರಿಂದಾಗಿ ವಿಗ್ರಹಾರಾಧನೆಯಲ್ಲಿ ಭಾಗವಹಿಸುತ್ತಿರುವ ರೆಂಬುದನ್ನು ಜಾಹಿರಾತುಪಡಿಸುತ್ತದೆ. ಈ ನಡವಳಿಕೆಯು ವಿಗ್ರಹಾರಾಧಕನ ನಡವಳಿಕೆಯ ಹಾಗೆಯೇ ಇರುತ್ತದೆ, ಜ್ಞಾನದ ಆಧಾರದ ಮೇಲೆ ವ್ಯತ್ಯಾಸವನ್ನು ಮಾಡಲಾಗುದಿಲ್ಲ (8:11 ನೋಡಿರಿ). ಪೌಲನ ಚಿಂತನೆಗಳ ಪ್ರಕಾರ, ಜ್ಞಾನವನ್ನು ವೃದ್ಧಿಸುವ ಪ್ರೀತಿಯು ಯಾವುದೇ ಸಂದರ್ಭದಲ್ಲಿಯೂ ವಿಗ್ರಹಗಳ ಆಲಯದಲ್ಲಿ ವಿಗ್ರಹಕ್ಕೆ ನೈವೇದ್ಯ ಮಾಡಿದ ಮಾಂಸವನ್ನು ತಿನ್ನುವುದಕ್ಕೆ ಕ್ರೈಸ್ತನಿಗೆ ಅನುಮತಿಸುವುದಿಲ್ಲ (8:10).

**ವಚನ 2.** ಆಗ್ಗಾಗ್ಗೆ ವಿಗ್ರಹಾಲಯದಲ್ಲಿರುವ ಕೊರಿಂಥದವರನ್ನು ಸರಿಪಡಿಸುವದಕ್ಕೆ, ಪೌಲನು, ನಿಜವಾಗಿಯೂ ಜ್ಞಾನವುಳ್ಳವರು ಯಾರಿದ್ದಾರೋ ಅವರು ತಮ್ಮ ಜ್ಞಾನದ ಮಿತಿಯನ್ನು ಅರಿತಿರುತ್ತಾರೆ ಎಂದು ಹೇಳಿದ್ದಾನೆ. ಅವನು ಈಗಾಗಲೇ ಅಹಂಕಾರವುಳ್ಳ ಜ್ಞಾನದ ಕುರಿತು ಉದ್ದೇಶಿಸಿ ಹೇಳಿದ್ದಾನೆ (2; 3). ಜ್ಞಾನವು ತನ್ನದೆಂದು ಹೇಳುವ ಮೂಲಕ ಯಾರು ವಿಗ್ರಹಾರಾಧನೆಯೊಂದಿಗೆ ಸಂಧಾನ ಮಾಡಿಕೊಳ್ಳುತ್ತಾರೋ ಅದು ಈ ಮುಂಚೆಯೇ ಜ್ಞಾನವನ್ನು ಉದ್ದೇಶಿಸಿ ಹೇಳಿದ ರೀತಿಯದ್ದಾಗಿದೆ. ಇಂತಹ ಜ್ಞಾನ ಮತ್ತು ವಿವೇಕವುಳ್ಳವರ ಹೃದಯದಲ್ಲಿ ಅಹಂಕಾರವು ಇರುತ್ತದೆ. ಈ ಮುಂಚಿತವಾಗಿ ಅಪೊಸ್ತಲ ಹೇಳಿದ ಹಾಗೇ ಅವನ ಮಾತುಗಳು "ಮಾನುಷಜ್ಞಾನವು ಕಲಿಸಿದ ಮಾತುಗಳಲ್ಲ" (2:13; 1:26-31 ನೋಡಿರಿ). ತಮ್ಮ ಸ್ವಂತ ಜ್ಞಾನವು ತುಂಬಾ ಹೆಚ್ಚಿನದು ಎಂದು ಅಭಿಪ್ರಾಯ ಹೊಂದಿದ ಕೊರಿಂಥದವರಿಗೆ, ಪೌಲನು, **ಯಾರಾದರೂ ತಾನು ಎಲ್ಲವನ್ನೂ ತಿಳಿದುಕೊಂಡಿದ್ದೇನೆಂದು ಕಲ್ಪಿಸಿಕೊಳ್ಳುವವರು, ತಾನು ತಿಳಿದುಕೊಳ್ಳಬೇಕಾಗಿರುವದನ್ನು ಇನ್ನೂ ತಿಳಿದುಕೊಂಡಿಲ್ಲ,** ಎಂದು ಹೇಳಿದ್ದಾನೆ. ಅವರು ಪೌಲನ ಅಪೊಸ್ತಲಿಕ ಜ್ಞಾನವು ತಮ್ಮ ಜ್ಞಾನಕ್ಕಿಂತ ಭಿನ್ನವಾದದ್ದಾಗಿದೆ ಎಂದು ಒಪ್ಪಿಕೊಳ್ಳುವ ಅಗತ್ಯತೆಯಿದೆ.

ತಮ್ಮ ಜ್ಞಾನವನ್ನು ನೆಪಕ್ಕಾಗಿ ಉಪಯೋಗಿಸುವವನ್ನು ಇತರರನ್ನು ಗಣನೆಗೆ ತೆಗೆದುಕೊಳ್ಳದ ಕ್ರಿಯೆ ಈ ಎರಡೂ ಅಹಂಕಾರ ಮತ್ತು ಅಧ್ಯಾತ್ಮಿಕವಾಗಿ ಅಜ್ಞಾನಿಗಳದ್ದಾಗಿದೆ. ಕ್ರೈಸ್ತರು ಯಾರು "ತಾವು ತಿಳಿದುಕೊಳ್ಳಬೇಕಾದ ರೀತಿಯಲ್ಲಿ ತಿಳಿದುಕೊಂಡಿದ್ದಾರೋ" ಮಾನುಷಜ್ಞಾನವನ್ನು ಗುರುತಿಸುತ್ತಾರೋ ಸ್ವಭಾವದಲ್ಲಿ ಅನಿಶ್ಚಿತರಾಗಿರುತ್ತಾರೋ ಅವರು. ಪರಿಪೂರ್ಣ ಜ್ಞಾನವು ದೇವರ ಅಧಿಪತ್ಯ. ನಾವು ತಿಳಿಯಬಹುದಾದ ಒಂದು ಸತ್ಯ ಎಂದರೆ ದೇವರು ಮಾತಾಡಿರುವವುಗಳು. ಹತ್ತೊಂಬತನೆಯ ಶತಮಾನದ ಬ್ರಿಟಿಷ್ ಬರಹಗಾರ William Cowper, "ನಾನು ಜ್ಞಾನವನ್ನು ಬಹಳವಾಗಿ ಸಂಪಾದಿಸಿದ್ದೇನೆ; ಜ್ಞಾನವು ದೀನತೆಯಾಗಿದ್ದೇ ಅದಕ್ಕಿಂತ

ಹೆಚ್ಚಾದದನ್ನು ನಾನು ತಿಳಿದಿಲ್ಲ."[5] ಜ್ಞಾನವು, ಮನೋವಿಜ್ಞಾನವಿದ್ದ ಹಾಗೆ, ಕೆಲವೊಮ್ಮೆ ಗುಣವಾಗ ಬೇಕಾಗಿರುವ ರೋಗಕ್ಕೆ ಇದು ಮದ್ದಾಗಿರುತ್ತದೆ.[6]

**ವಚನ 3. ದೇವರನ್ನು ಪ್ರೀತಿಸುವ ವಿಶ್ವಾಸಿಯು**, ಜ್ಞಾನದ ಕುರಿತು ಹೆಮ್ಮೆಯು ಪಡುವವನಲ್ಲ, ಆತನ ಮೂಲಕ ಗುರುತಿಸಲ್ಪಡುವನಾಗಿದ್ದಾನೆ. ಒಂದು ವೇಳೆ NASB ಯಿಂದ ಸ್ವೀಕರಿಸಿದ ಅನುವಾದ ಸರಿಯಿದ್ದರೆ, ವಿಧೇಯನಾದ ವಿಶ್ವಾಸಿಯು ತಾನು ದೇವರು ತನನ್ನು ತಿಳಿದುಕೊಳ್ಳಲಿ ಎಂದು ತಾನು ಮಾಡಿದಂತೆ ದೇವರನ್ನು ತಿಳಿದುಕೊಳ್ಳಲು ಅಷ್ಟಾಗಿ ಪ್ರೀತಿಸುವವನಲ್ಲ. ಕ್ರೈಸರಲ್ಲಿರುವ ಪ್ರೀತಿಯ ಅಭ್ಯಾಸವು ಅವನಿಗೋಸ್ಕರವಾಗಿರುವ ದೇವರ ಪ್ರೀತಿಗೆ ಸಾಕ್ಷಿಯಾಗಿದೆ. ಆತ್ಮನಿಂದ ನಡೆಸಲ್ಪಟ್ಟ ಅಪೊಸ್ತಲನು ತಿಳಿದುಕೊಂಡಿರುವ ಹಾಗೇ ಮನುಷ್ಯನ ಜೀವಿತದ ಗುರಿಯು, ಅದನ್ನು ಒಬ್ಬ ವ್ಯಕ್ತಿಗೆ ಗೌರವ ಮತ್ತು ಲಾಭವನ್ನು ತುರವ ಜ್ಞಾನದಿಂದ ಹೊಂದಿಕೊಳ್ಳುವದಲ್ಲ.

ಮೇಲಿನ ಅರ್ಥೈಸುವಿಕೆಗೆ ಬದಲಾಗಿ, "ದೇವರು" (τὸν θεόν, *ton theon*) ಮತ್ತು "ಆತನ ಮೂಲಕ" (ὑπ᾽ αὐτοῦ, *hup᾽ autou*) ಎಂಬ ಶಬ್ದಗಳನ್ನು ಪಠ್ಯದಿಂದ ಎಲ್ಲಾ ಗೌರವದೊಂದಿಗೆ ಮತ್ತು ಕೊರಿಂಥದ ಪ್ರಾಚೀನ ಪ್ರತಿ ಮತ್ತು ಓದುತ್ತಿರುವ ಎರಡನೆಯ ಶತಮಾನದಲ್ಲಿದ್ದ ಅಲೆಗ್ಸಾಂಡ್ರಿಯಾದ ಪಂಡಿತ Clement, ಅವರು ಒದಗಿಸಿದ ವಚನದಿಂದ ತೆಗೆದುಕೊಳ್ಳಲಾಗಿದೆ ಪದಗಳನ್ನು ಬಿಟ್ಟುಬಿಟ್ಟಿರುವದು ವಚನವನ್ನು ಹೆಚ್ಚು ದೃಢವಾಗಿ ಪೌಲನ ಮೇಲಿನ ಎಲ್ಲಾ ವಿವೇಚನೆಯ ಸಾಲುಗಳನ್ನು ಬಿಡುವದಾಗಿದೆ. ಈ ಪದವನ್ನು ಕೈಬಿಡುವದು ಮತ್ತು ἔγνωσται (*egnōstai*, "ಅವನಿಗೆ ತಿಳಿದಿದೆ") ಪದವನ್ನು ಮಧ್ಯದ ಸ್ವರವಾಗಿ ತೆಗೆದುಕೊಳ್ಳುವದು ಈ ಅನುವಾದವನ್ನು ನೀಡುತ್ತದೆ. "ಒಂದು ವೇಳೆ ಯಾರಾದರೂ ಪ್ರೀತಿಸಿದರೆ, ನಿಜವಾಗಿಯೂ ತಿಳಿದಿರುತ್ತಾರೆ." ಕರ್ಮಣಿ ಕ್ರಿಯಾ ರೂಪದಲ್ಲಿ ಅರ್ಥೈಸಿರುವ ಹಾಗೆ, ಇದು ಹೀಗೆ ಹೇಳುತ್ತದೆ "ಒಂದು ವೇಳೆ ಯಾರಾದರೂ ಪ್ರೀತಿಸಿದರೆ, ಅದನ್ನು ನಿಜವಾಗಿಯೂ ತಿಳಿದವರಾಗಿರುತ್ತಾರೆ." ಈ ಓದುವ ಹೇಳಿಕೆ ಮನಮುಟ್ಟುವಂತಿದೆ, ಹ್ಯಾಗೂ ಹಸ್ತಪ್ರತಿ ಧೀರ್ಘವಾಗಿ ಓದುವದನ್ನು ಮೆಚ್ಚಿಕೊಳ್ಳುತ್ತದೆ. ಓದಲು ಕೊಟ್ಟಿರುವ ಭಾಗವನ್ನು ಸ್ವೀಕರಿಸುವದು ಉತ್ತಮ ಯಾಕಂದರೆ ಇದು ಕಾಂದಬರಿ ರೂಪದ ವಿಚಾರಗಳನ್ನು ನೀಡುತ್ತದೆ.

## ದೇವರು ಪ್ರತಿ ವಿಗ್ರಹಗಳು (8:4-6)

**4ವಿಗ್ರಹಗಳಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನುವದರ ವಿಷಯದಲ್ಲಿ ನಾನು ಹೇಳುವದೇನಂದರೆ ಜಗತ್ತಿನಲ್ಲಿ ವಿಗ್ರಹವು ಏನೂ ಅಲ್ಲವೆಂದು ಒಬ್ಬ ದೇವರಿದ್ದಾನೆ ಹೊರತು ಬೇರೆ ದೇವರಿಲ್ಲವೆಂದೂ ಬಲ್ಲೆವು. 5ಅನೇಕರನ್ನು ದೇವರುಗಳೆಂದೂ ಕರ್ತರೆಂದೂ ಪೂಜಿಸುವದುಂಟು ನಿಜವೇ ಆಕಾಶದಲ್ಲಿಯಾಗಲಿ ಭೂಮಿಯ ಮೇಲೆಯಾಗಲಿ ದೇವರುಗಳೆನಿಸಿಕೊಳ್ಳುವವರಿದ್ದಾರೆ, 6ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೆ; ಆತನು ಸಮಸ್ತಕ್ಕೂ ಮೂಲಕಾರಣನು; ನಾವು ಆತನಿಗಾಗಿ ಉಂಟಾದೆವು, ಮತ್ತು ನಮಗೆ ಒಬ್ಬನೇ ಕರ್ತ ಆತನು ಯೇಸು ಕ್ರಿಸ್ತನೆ; ಆತನ ಮುಖಾಂತರ ಸಮಸ್ತವೂ ಉಂಟಾಯಿತು, ನಾವೂ ಆತನ ಮುಖಾಂತರ ಉಂಟಾದೆವು.**

**ವಚನ 4.** ಕೊರಿಂಥದವರಿಗೆ ಜ್ಞಾನ ಮತ್ತು ಪ್ರೀತಿ ಇವುಗಳ ಅಂತರ-ಸಂಬಂಧವನ್ನು ಪರಿಶೀಲಿಸುವ ಪಂಥಾಹ್ವಾನದ ಮೂಲಕ ಪೌಲನು ಚರ್ಚೆಗೋಸ್ಕರ ಅಡಿಪಾಯ ಹಾಕುತ್ತಾನೆ. ನಂತರ ಅವನು ಚರ್ಚಿಸುವ ಅಗತ್ಯವಿರುವ; ವಿಗ್ರಹಗಳ ಆಲಯದಲ್ಲಿ ವಿಗ್ರಹಕ್ಕೆ ನೈವೇದ್ಯ ಮಾಡಿದ ಮಾಂಸವನ್ನು ತಿನ್ನುವ ವಿಷಯದತ್ತ ತಿರುಗುತ್ತಾನೆ. ಅವನು ಈ ಊಟವನ್ನು **ವಿಗ್ರಹಗಳಿಗೆ ಸಮರ್ಪಿಸಿದ್ದು** ಎಂದು ಉಲ್ಲೇಖಿಸುತ್ತಾನೆ (*eidōlothuton*), ಆದರೆ ವಿಗ್ರಹಾರಾಧಕ ಭಕ್ತನು ಹೇಳುವಂತೆ ಇದು "ದೇವತೆಗಳಿಗೆ ಸಮರ್ಪಿಸಿದ್ದಾಗಿದೆ [ἱερόθυτον, *hierothuton*]"[7] ಪೌಲನ ವಾದವು ವಿಗ್ರಹಾರಾಧಕನು ಇದನ್ನು ದೈವಿಕ ಎಂದು ಹೇಳುವದನ್ನು ನಿರಾಕರಿಸುವ ಮೂಲಕ, ರೇಗಿಸುತ್ತಾನೆ, ಬಹುಶಃ ಕೋಪವನ್ನೆಬ್ಬಿಸುತ್ತದೆ, ಎಂದು ಅರ್ಥೈಸಿಕೊಂಡಿದ್ದಾನೆ. ವಿಗ್ರಹಾರಾಧಕನ ದೇವಸ್ಥಾನದಲ್ಲಿ ಪಶುವನ್ನು ಹತ್ಯೆ ಮಾಡುವದರಿಂದ ಅದರ ಮಾಂಸವನ್ನು ಪವಿತ್ರ ಮಾಡಲು ಆಗುವದಿಲ್ಲ ಎಂದು ಅಪೊಸ್ತಲನಿಗೆ ತಿಳಿದಿತ್ತು. ಒಬ್ಬ ಒಳ್ಳೆಯ ಯಹೂದಿ ಅಥವಾ ಒಬ್ಬ ಕ್ರೈಸ್ತನು ಮಾತ್ರ ವಿಗ್ರಹಗಳ ಬಗ್ಗೆ ಮಾತನಾಡಬಹುದು, "ವಿಗ್ರಹಗಳಿಗೆ ಅರ್ಪಿಸಿದ ಪದಾರ್ಥಗಳು," ವಿಗ್ರಹಗಳ ಆಲಯ, ಮತ್ತು ವಿಗ್ರಹಗಳನ್ನು ಅತ್ಯಂತ ತಿರಸ್ಕಾರದಿಂದ ಆರಾಧಿಸುವದಾಗಿದೆ. ಖಂಡಿತವಾಗಿ ಪೌಲನು ಕೊರಿಂಥದ ಕ್ರೈಸ್ತರು ಹಕ್ಕುಸಾಧಿಸುವ ಜ್ಞಾನವನ್ನು ಹಂಚಿಕೊಂಡನು. ಒಂದು ಪಶುವನ್ನು ವಿಗ್ರಹಾರಾಧಕನ ದೇವರಿಗೆ ಅರ್ಪಿಸಿದಾಗ, ಆ ನೈವೇದ್ಯವು ಯಾವುದಕ್ಕೂ ಅಲ್ಲ. ಈ ದೇವರು ವಿಗ್ರಹಾರಾಧಕನ ಕಲ್ಪಿತ ಹೇಳಿಕೆಯಾಗಿದೆ, ವಿಗ್ರಹದ ಭಕ್ತನ ಅಧ್ಯಾತ್ಮೀಕ ಅಜ್ಞಾನದ ಗುರುತಾಗಿದ್ದಾನೆ. ಇಂತಹ ದೇವರುಗಳಿಗೆ ಜಗತ್ತಿನಲ್ಲಿ ಅಸ್ತಿತ್ವವಿರುವುದಿಲ್ಲ ಎನ್ನುವದಕ್ಕೆ ಪೌಲನು ಒತ್ತುಕೊಡುತ್ತಾನೆ. ಅವನು ವಿಗ್ರಹಗಳ ಸೇವನೆ ಮಾಡುವವರ ಮದ್ಯೆ ಪೈಶಾಚಿಕ ಶಕ್ತಿಗಳು ಮತ್ತು ಅಗೋಚರ ಶಕ್ತಿಗಳು ಗಾಳಿಯಲ್ಲಿ ಕೆಲಸದಲ್ಲಿರುವದನ್ನು ಒಪ್ಪಿಕೊಂಡಿದ್ದಾನೆ (10:20; ಕೊಲೊ. 1:16 ನೋಡಿರಿ). ಹೇಗಾದರೂ, ಇವುಗಳಿಗೆ ಸ್ವತಂತ್ರವಾದ ಅಸ್ತಿತ್ವವಿಲ್ಲ "ಜಗತ್ತಿನಲ್ಲಿ"; ಅವುಗಳು ನೀತಿಭ್ರಷ್ಟ ಮನಸ್ಸುಗಳ ಸೃಷ್ಟಿಗಳಾಗಿವೆ.

ವಿಗ್ರಹಾರಾಧಕರ ದೇವರುಗಳು ಅಸ್ತಿತ್ವದಲ್ಲಿಲ್ಲದವುಗಳು; ಒಬ್ಬನೇ ಒಬ್ಬ ದೇವರು ಎಂದೆಂದೂ ಇರುವಾತನು. ಯೆಹೂದ್ಯರಿಗೆ ಇದು ಒಂದು ಸಾರಾಂಶವಾಗಿದೆ: "ಓ ಇಸ್ರಾಯೇಲ್ಯರೇ ಕೇಳಿರಿ, ನಮ್ಮ ದೇವರಾದ ಕರ್ತನು ಒಬ್ಬನೇ ದೇವರು (ಧರ್ಮೋ 6:4). "ಅವರ ವಿಗ್ರಹಗಳೋ ಬೆಳ್ಳಿ ಮತ್ತು ಬಂಗಾರದವುಗಳೇ, ಅವು ಮನುಷ್ಯರ ಕೈಕೆಲಸವಷ್ಟೇ," ಕೀರ್ತನೆಗಾರನು ವ್ಯತ್ಯಾಸವನ್ನು ತೋರಿಸುತ್ತಾ ಹೇಳುವದೇನಂದರೆ "ನಮ್ಮ ದೇವರು ಪರಲೋಕದಲ್ಲಿದ್ದಾನೆ, ಆತನು ತನಗೆ ಬೇಕಾದದ್ದನ್ನೆಲ್ಲಾ ಮಾಡುತ್ತಾನೆ" (ಕೀರ್ತನೆಗಳು 115:3, 4), Josephus ಹೀಗೆ ಬರೆದಿದ್ದಾನೆ:

> ಯಾವಾಗಲೂ ಅತಿ ಬೆಲೆಬಾಳುವವುಗಳಾಗಿರುವ ಎಲ್ಲಾ ವಸ್ತುಗಳನ್ನು, ಆತನಿಗಾಗಿ ಪ್ರತಿಮೆಯನ್ನು ಮಾಡುವದು ಅಯೋಗ್ಯವಾಗಿದೆ; ಮತ್ತು ಎಲ್ಲಾ ಕಲಾ ಕೌಶಲ್ಯಗಳು ಆತನನ್ನು ಕಲ್ಪಿಸುವದಕ್ಕೆ ಕಲಾತ್ಮಕವಲ್ಲದವುಗಳಲ್ಲ. ನಾವು ಆತನ ಹಾಗೆ ಇರುವ ಯಾವುದನ್ನೂ ನೋಡಲೂ ಅಥವಾ ಭಾವಿಸಲೂ ಸಾಧ್ಯವಿಲ್ಲ, ಅಥವಾ ಧಾರ್ಮಿಕತೆಗೆ ಆತನ[8] ಹೋಲಿಕೆಯನ್ನು ರೂಪಿಸುವದು ಸಾಧ್ಯವಿಲ್ಲ.[8]

**ವಚನ 5. ದೇವರೆಂದು ಕರೆಯಲ್ಪಡುವವುಗಳು** ವಂಚಿಸುವ ಜನರಿಂದ ಶೋಧಿತವಾದವುಗಳು. ವಿಗ್ರಹಾರಾಧಕರು, ತಮ್ಮ ಅಜ್ಞಾನದಲ್ಲಿ, ಈ ಕೆಲವು ದೇವರುಗಳನ್ನು **ಆಕಾಶದಲ್ಲಿಯೂ** ಮತ್ತು ಕೆಲವುಗಳನ್ನು **ಭೂಮಿಯ** ಮೇಲೆಯೂ ಇರಿಸಿದರು. ಅವುಗಳು ಪ್ರತಿ ಮೂಲೆಯಲ್ಲಿ ಅಡಗಿಕೊಂಡಿರುವಂತೆ ಕಾಣುತ್ತವೆ. ಸಣ್ಣ ದೇವಾಲಯದ ಮೂಲಕ ಅಡ್ಡ ರಸ್ತೆಗಳು ಸಣ್ಣ ಗುಡಿಗಳಿಗಾಗಿ ಇವೆ ಎಂದು ಗುರುತಿಸಲ್ಪಟ್ಟಿವೆ. ಪ್ರತಿ ಗಿಡಗಳ ತೋಪಗಳು, ಪ್ರತಿ ಖಾರಂಜಿಗಳು, ಮತ್ತು ಪ್ರತಿ ಮನೆಯ ಒಲೆಗೂಡುಗಳು, ತಮ್ಮದೇ ಆದ ಅಪ್ಸರೆಯರನ್ನು, ವನದೇವತೆಗಳನ್ನು, ಆತ್ಮಗಳನ್ನು ಮತ್ತು ಪಿಶಾಚಿಗಳನ್ನು ಹೊಂದಿವೆ ಗ್ರೀಕ್ ಪುರಾಣವು ಒಲಂಪಿಯನ್ ದೇವರುಗಳನ್ನು ಎತ್ತರವಾದ ಬೆಟ್ಟಗಳಲ್ಲಿ ಅಥವಾ ಆಕಾಶದಲ್ಲಿ ಇರಿಸಿವೆ. ಕನಿಷ್ಠ ಪಕ್ಷ ಕೆಲವು ಕೊರಿಂಥದ ಕ್ರೈಸ್ತರಾದರೂ ಗ್ರೀಕರ ಈ ದೈವಿಕ ಕಲ್ಪನೆಗೆ ಒಗ್ಗಿಕೊಂಡಿರಲಿಲ್ಲ. ಅವರು ಗ್ರೀಕ್-ರೋಮನರ ಸಂಸ್ಕೃತಿಯ **ಅನೇಕ ದೇವರುಗಳನ್ನು ಮತ್ತು ಅನೇಕ ಸ್ವಾಮಿಗಳನ್ನು** ಸೇವಿಸಿದಾಗಿನ, ಗತಕಾಲದಿಂದ ಹಿಂದಿರುಗುವದು ಕಠಿಣವಾಗಿತ್ತು.

**ವಚನ 6.** ವಿಗ್ರಹಗಳ ಆಲಯದಲ್ಲಿ ವಿಗ್ರಹಗಳಿಗೆ ನೈವೇದ್ಯ ಮಾಡಿದ ಮಾಂಸವನ್ನು ತಿನ್ನುವ ಕುರಿತು ಕ್ರೈಸ್ತರು ಯಾವುದೇ ತೀರ್ಮಾನಕ್ಕೆ ತಲುಪಿದರೂ, ಅವರು ತಮ್ಮ ನಡವಳಿಕೆಯನ್ನು ದೇವರ ಏಕತ್ವದ ಬೆಳಕಿನಲ್ಲಿ ವಿಗ್ರಹಗಳ ಶೂನ್ಯತೆಯ, ಮತ್ತು ವಿಗ್ರಹಾರಾಧಕನು ತಾನೇ ಸೃಷ್ಟಿಸಿದ ದೇವರುಗಳನ್ನು ಸೇವಿಸುವ ತೀವ್ರತೆಯನ್ನು ಮೌಲ್ಯಮಾಪನ ಮಾಡುವ ಅವಶ್ಯಕತೆಯಿತ್ತು. ವಿಗ್ರಹಗಳನ್ನು ಸೇವಿಸುವವರಿಗೆ ವ್ಯತಿರಿಕ್ತವಾಗಿ, ಕ್ರೈಸ್ತರು **ತಂದೆಯಾದ ದೇವರು** ಒಬ್ಬನೇ ಎಂದು ತಿಳಿದಿದ್ದರು. ಪೌಲನ ಬೋಧನೆಯು, ಯೇಸು ಕ್ರಿಸ್ತನ ತಂದೆಯಾದ ದೇವರು ಒಬ್ಬನೇ ಮತ್ತು ಪ್ರಾಚೀನ ಕಾಲದಲ್ಲಿ ದೈವಿಕತ್ವದ ಕುರಿತು ಇದ್ದ ಊಹಾಪೋಹಗಳಿಗೆ ಆತನು ಸಂಪೂರ್ಣವಾಗಿ ಸವಾಲಾಗಿದ್ದನು. ದೇವರು ಒಬ್ಬನೇ ಎಂಬ ದೃಢೀಕರಿಸುವಿಕೆಯು ಯೆಹೂದಿಯರಿಗೆ ಮತ್ತು ಕ್ರೈಸ್ತರಿಗೆ ಎಷ್ಟೊಂದು ಮಹತ್ವವಾಗಿತ್ತೆಂದರೆ, ಅದನ್ನು ಪುನರಾವರ್ತಿಸುವದು ಬೇಸರವನ್ನು ಹುಟ್ಟಿಸುತ್ತದೆ (8:4 ನೋಡಿರಿ). ಎಲ್ಲಾ ಜೀವನ ಆತನಿಂದಲೆ ಬಂದದ್ದು ಮತ್ತು ಆತನ ಮೂಲಕವೇ ಉಳಿದಿದ್ದೇವೆ; **ಕ್ರಿಸ್ತನಲ್ಲಿ ಸಮಸ್ತವೂ ಇದೆ, ಮತ್ತು ಆತನ ಮೂಲಕವೇ ನಾವು ಜೀವಿಸುತ್ತಿದ್ದೇವೆ.**

ದೇವರೇ ಸೃಷ್ಟಿಕರ್ತನು ಎಂಬುದು ಸತ್ಯವೇದದ ಪ್ರಕಾರ ಅತ್ಯಂತ ಪ್ರಾಮುಖ್ಯವಾದ ವಿಚಾರ, ಆದರೆ ತರ್ಕಶಾಸ್ತ್ರವು ದೇವರನ್ನು ಸೃಷ್ಟಿ ಕರ್ತನೆಂದು ಒಪ್ಪುವದಿಲ್ಲ. ಪ್ರಾಚೀನರ ಊಹೆಯಂತೆ ದೇವರುಗಳು ಬ್ರಹ್ಮಾಂಡದ ಉತ್ಪನ್ನಗಳು, ಅದರ ಸೃಷ್ಟಿಕರ್ತನಲ್ಲ, ಪ್ರಾಚೀನ *Enuma Elish* ("ಎತ್ತರದಲ್ಲಿ ಮೇಲೆ ಇದ್ದಾಗ" ಎಂದು ಅರ್ಥ) ಆರಂಭಿಕ ಶಬ್ದಗಳು ದೇವರುಗಳು ಆದಿಕಾಲದಲ್ಲಿದ್ದ ಒಂದು ರೀತಿಯ ಜೇಡಿಮಣ್ಣಿನಿಂದ ಹುಟ್ಟಿಕೊಂಡರೆಂಬ ಕಲ್ಪನೆಯನ್ನು ನೀಡುತ್ತದೆ. ತಂದೆ ಮತ್ತು ತಾಯಿಗಳಿಂದ ದೂರವಿರುವ ಮನುಷ್ಯಕುಲವು, ಈ ದೇವರುಗಳು ತಮ್ಮ ಸೇವೆಯನ್ನು ಮಾಡುವದಕ್ಕೆ ಸೃಷ್ಟಿಸಲ್ಪಟ್ಟಿವೆ ಎಂದು ನಂಬವಂತಾಗುತ್ತದೆ. Akkadian mythನ ಕಟ್ಟುಕಥೆಯಲ್ಲಿ ದೇವರುಗಳು ಮನುಷ್ಯರ ಕಷ್ಟಕ್ಕೆ ವ್ಯತಿರಿಕ್ತವಾದ ವರ್ತನೆಯನ್ನು ಮತ್ತು ಉದಾಸೀನತೆಯನ್ನು ಹೊಂದಿದ್ದಾರೆ.[9] ಪೌಲನ ಬೋಧನೆಯು, ಯೇಸು ಕ್ರಿಸ್ತನ ತಂದೆಯಾದ ದೇವರು ಒಬ್ಬನೇ, ಮತ್ತು ಆತನೇ

ಪ್ರಾಚೀನ ಲೋಕದಲ್ಲಿ ದೈವೀಕತೆಯ ಕುರಿತು ಮೂಲತಃ ವೀಕ್ಷಕರಿಗೆ ಸವಾಲನ್ನು ನೀಡುವ ಸೃಷ್ಟಿಕರ್ತನಾಗಿದ್ದಾನೆ.

ಪೌಲನ ದೃಷ್ಟಿಕೋನದಲ್ಲಿ ವಿಗ್ರಹಗಳು, ಮನುಷ್ಯನ ಕಲ್ಪಿತ ಸೃಷ್ಟಿಗಳಾಗಿವೆ. ಅವುಗಳು ಅಹಂಕಾರದಿಂದ ಮತ್ತು ಅಜ್ಞಾನದಿಂದ ಹುಟ್ಟಿದವುಗಳಾಗಿವೆ. ಇಸ್ರಾಯೇಲ್ಯರ ದೇವರ ಜ್ಞಾನವು, ದೇವರ ಸ್ವಯಂ-ಬಹಿರಂಗಪಡಿಸುವಿಕೆಯ ಮೂಲವಾಗಿದೆ. ತಂದೆಯಾದ ದೇವರನ್ನು ಜನಾಂಗಗಳ ದೇವರುಗಳೊಂದಿಗೆ ಹೋಲಿಸಲು ಸಾಧ್ಯವಿಲ್ಲ. ನಿಪಕ್ಷಪಾತಿಯಾಗಿರುವ ದೇವರು, ಆತನು ಇಸ್ರಾಯೇಲ್ಯರನ್ನು ಮತ್ತು ಜನಾಂಗಗಳನ್ನು ಒಂದೇ ರೀತಿಯಾಗಿ ಪ್ರೀತಿಸಿದನು (ಅ.ಕೃ. 10:34; ರೋಮಾ 2:11). ದೇವರು ಪಾಲಿಸುತ್ತಾನೆ ಮತ್ತು ಎಲ್ಲ ಜೀವಗಳನ್ನು ಉಳಿಸುತ್ತಾನೆ; ನಾವು ಆತನಿಗಾಗಿ ಮತ್ತು "ಆತನ ಮೂಲಕ" ಜೀವಿಸುತ್ತೇವೆ.

ದೇವರ ಏಕತ್ವದ ಕುರಿತು ಸಂಧಾನಮಾಡಿಕೊಳ್ಳದೆ, ಪೌಲನು **ಯೇಸುಕ್ರಿಸ್ತನಾದ, ಒಬ್ಬನೆ ಕರ್ತನೆಡೆಗೆ** ಕಾರ್ಯಪ್ರವೃತ್ತನಾದನು. ಯೇಸುಕ್ರಿಸ್ತನ ಆಧಿಪತ್ಯವು, ದೇವರ ಏಕತ್ವದಿಂದ ಬೇರ್ಪಡಿಸುವದು ಸಾಧ್ಯವಿಲ್ಲ. ದೇವರೇ ಸಮಸ್ತಕ್ಕೂ ಮೂಲನು, ಆದರೆ ಯೇಸು ಕ್ರಿಸ್ತನ ಕುರಿತು, "ಇವನ ಮೂಲಕ ಸಮಸ್ತವೂ" ಎಂಬ ಹೇಳಿಕೆಯೂ ಸ್ಪಷ್ಟವಾಗಿದೆ. ತಂದೆಯ ಕುರಿತು ಏನು ಹೇಳಿದರೋ, ಮಗನ ಕುರಿತು ಸಹ ಅದನ್ನೇ ಹೇಳಿದರು. ಮನುಷ್ಯಕುಲವು ದೇವರಿಗಾಗಿ ಜೀವಿಸುತ್ತದೆ ಎಂದು ನಿಖರವಾಗಿ ಹೇಳುವದರಿಂದ, "ನಾವು ಕ್ರಿಸ್ತನ ಮೂಲಕ ಜೀವಿಸುತ್ತೇವೆ" ಎಂಬುದು ಸಹ ನಿಜ. ಹೊಸ ಒಡಂಬಡಿಕೆಯು "ತ್ರಯೇಕತ್ವ" ಶಬ್ಧವನ್ನು ಉಪಯೋಗಿಸದೇ ಇರುವಾಗ, ಇಂತಹ ಕೆಲವು ಪರಿಕಲ್ಪನೆಗಳು ಅಗತ್ಯ. ಹೊಸ ಒಡಂಬಡಿಕೆಯು ಪೂರ್ಣ ಸ್ತೋತ್ರವನ್ನು, ದೇವರೊಬ್ಬನಿಗೇ ಮೀಸಲಾಗಿಡುವದಕ್ಕಿಂತ ಹೆಚ್ಚಾಗಿ ಕ್ರಿಸ್ತನಿಗೆ ಕೊಡುತ್ತದೆ. ಆದಿಯಿಂದ ಯೇಸುವೇ ದೇವರು (ಯೋಹಾನ 1:1). ಆತನಲ್ಲಿಯೇ ದೇವರ ಪರಿಪೂರ್ಣತೆಯು (ಕೊಲೊಸ್ಸೆ 2:9).

ಪೌಲನು ಕ್ರಿಸ್ತನಾದ ದೇವರನ್ನು ವಿವರಿಸಲು ಅಲಂಕಾರಿಕ ರೂಪಕಗಳನ್ನು ಕೊಡುವದನ್ನು ಮುಂದುವರೆಸಿದನು; ಆತನ ಜ್ಞಾನದಲ್ಲಿ ವಸ್ತುಗಳಂತೆ ವರ್ಣಿಸಿದನು. ಈ ಅಲಂಕಾರಿಕ ರೂಪೋಕ್ತಿಯು ಕೊಲೊಸ್ಸೆ 1:15-17ರಲ್ಲಿ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ಪೌಲನು ವರ್ಣಿಸುವಂತೆ ಯೇಸುವು ಹಳೇ ಒಡಂಬಡಿಕೆಯಲ್ಲಿ, ಮುಖ್ಯವಾಗಿ ಜ್ಞಾನೋಕ್ತಿಗಳಲ್ಲಿ ಹೊರ ಜ್ಞಾನದ ಮೇಲೆ ಅವಲಂಭಿಸಿರುವದು ಕಂಡು ಬರುತ್ತದೆ. ವಿಮರ್ಶಕರು ಈ ವ್ಯಕ್ತಿಕರಣವನ್ನು "ಸ್ತ್ರೀ ಜ್ಞಾನ"[10] ವೆಂದು ವ್ಯಾಖ್ಯಾನಿಸುತ್ತಾರೆ. ವಾಕ್ಯಗಳಲ್ಲಿ ಯೇಸುವಿನ ಕುರಿತಾದ ಸತ್ಯಗಳನ್ನು ಜ್ಞಾನವು ಹೀಗೆ ಘೋಷಿಸುತ್ತದೆ, "ಯೆಹೋವನು ತನ್ನ ಸೃಷ್ಟಿಕ್ರಮದಲ್ಲಿ ಮೊದಲು ನನ್ನನ್ನು ನಿರ್ಮಿಸಿದನು; ಆತನ ಪುರಾತನಕಾರ್ಯಗಳಲ್ಲಿ ನಾನೇ ಪ್ರಥಮ. ಪ್ರಾರಂಭದಲ್ಲಿ ಭೂಮಿಯು ಹುಟ್ಟುವದಕ್ಕಿಂತ ಮುಂಚೆ, ಅನಾದಿಕಾಲದಲ್ಲಿ ಸ್ಥಾಪಿಸಲ್ಪಟ್ಟೆನು" (ಜ್ಞಾನೋ. 8:22, 23). ಪೌಲನು ಜ್ಞಾನದ ವೈಶಿಷ್ಟ್ಯಗಳನ್ನು ವ್ಯಕ್ತಿಯಾದ ನಜರೇತಿನ ಯೇಸುವಿಗೆ ವರ್ಗಾಯಿಸಿ ಅವನು ಬರೆದಾಗ "ಆತನು ಅದೃಶ್ಯನಾದ ದೇವರ ಪ್ರತಿರೂಪನು ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನ ಹೊಂದಿದವನೂ ಆಗಿದ್ದಾನೆ" (ಕೊಲೊ. 1:15, 16ಅ) ಎಂಬುದಾಗಿದೆ. ಜ್ಞಾನದ ಹಾಗೆಯೇ, ಪ್ರಾರಂಭದಿಂದಲ್ಲಿಯೇ ಆತನ ಮುಖಾಂತರ ಸೃಷ್ಟಿಯು ಸೃಷ್ಟಿಸಲ್ಪಟ್ಟಿತು.

ಪೌಲನು ತಾನು ತನ್ನ ಪತ್ರವನ್ನು ಸ್ವೀಕರಿಸುವವರೊಂದಿಗೆ ಜ್ಞಾನವನ್ನು ಹಂಚಿಕೊಳ್ಳುವ ಮೂಲಕ 8:1ರಲ್ಲಿ ಹೇಳಿದ ವಿಷಯವನ್ನು ಒತ್ತಿ ಹೇಳಿದ್ದಾನೆ: ಅವರೆಲ್ಲರೂ ವಿಗ್ರಹಗಳನ್ನು ಆರಾಧಿಸುವದರ ಆಶಾರಹಿತತೆಯನ್ನು ಮತ್ತು ಮೌಢ್ಯತನವನ್ನು ಅರ್ಥ ಮಾಡಿಕೊಂಡಿದ್ದಾರೆ. ವಿಗ್ರಹಕ್ಕೆ ನೈವೇದ್ಯ ಮಾಡಿದ ಆಹಾರವನ್ನು ತಿನ್ನುವದು, ಬಹುಶಃ ವಿಗ್ರಹಲಾಯದಲ್ಲಿ, ವಿಗ್ರಹದೊಂದಿಗಿನ ಸಂಬಂಧದ ಆಚರಣೆಗಳಲ್ಲಿ ಭಾಗವಹಿಸುವದು ಸಹ ನಿಜವಾಗಿತ್ತು (8:10), ವಿಗ್ರಹ ಏನೂ ಅಲ್ಲವೆಂದು ತಿಳಿದವರಿಗೆ ಯಾವ ಪರಿಣಾಮವಿಲ್ಲ. ಆದಾಗ್ಯೂ, ಕ್ರೈಸ್ತರು ಒಂಟಿಯಾಗಿ ಜೀವಿಸಬಾರದು; ಪ್ರತಿಯೊಬ್ಬನು ವಿಶ್ವಾಸಿಗಳ ಸಮುದಾಯಕ್ಕೆ ಸಹಾಯಕರಾಗಬೇಕು ಎಂದು ಅಪೊಸ್ತಲನು ಸೂಚಿಸುತ್ತಾನೆ. ನಂತರ ಅವನು "ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ" (ರೋಮಾ 12:5) ಎಂದು ಬರೆಯುತಾನೆ. ಈ ದಿನದ ಕ್ರೈಸ್ತರು ಪೌಲನ ಬುದ್ಧಿವಾದದಿಂದ ಕಲಿಯುವ ಅವಶ್ಯಕತೆಯಿದೆ. ಪಾಪಗಳ ಕ್ಷಮಿಸುವಿಕೆಯಲ್ಲಿ ಭಾಗ ತೆಗೆದುಕೊಳ್ಳುವದು ಮತ್ತು ನಿತ್ಯತ್ವದ ಜೀವಿತದಲ್ಲಿ ನೀರೀಕ್ಷೆಯಿಡುವದರ ಅರ್ಥ ಕರ್ತನಾದ ಯೇಸುವನ್ನು ಹೃದಯದಲ್ಲಿ ಬರುವದಕ್ಕೆ ಅನುಮತಿಸುವದಕ್ಕಿಂತ ಹೆಚ್ಚಿನದಾಗಿದೆ. ಈ ಪ್ರಯೋಜನಗಳು ಸಮುದಾಯದಲ್ಲಿ ಜೀವಿಸುವ ಜವಾಬ್ದಾರಿಗಳೊಂದಿಗೆ ಬರುತ್ತವೆ. ವಯಕ್ತಿಕ ನಡವಳಿಕೆಯು ಸಂಪೂರ್ಣ ದೇಹದ ಮೇಲೆ ಸಂಪೂರ್ಣವಾಗಿ ಪರಿಣಾಮ ಬೀರುತ್ತದೆ.

## ತಿಳುವಳಿಕೆ ಮತ್ತು ಅದರ ಮಿತಿಗಳು (8:7-13)

ಪೌಲನು ಈಗಾಗಲೇ ಜ್ಞಾನವು, ಮಹತ್ವದ್ದಾಗಿರಬಹುದು, ಆದರೆ ಪ್ರೀತಿಯನ್ನು ಆಕ್ರಮಿಸಿಕೊಳ್ಳಲಾರದು ಎಂದು ಒತ್ತಿ ಹೇಳಿದ್ದಾನೆ (8:1). ಜ್ಞಾನದ ಮೇಲೆ ಅವಲಂಭನೆ ಗೊಳ್ಳುವದು ಹೇಗೆ ಪ್ರೀತಿಯನ್ನು ಕಾಂತಿಹೀನಗೊಳಿಸಬಹುದು ಎಂಬುದನ್ನು ವಿವರಿಸುವದು ಅವನಲ್ಲಿ ಹಾಗೆ ಉಳಿದುಕೊಂಡಿದೆ. ಜ್ಞಾನದ ಮೇಲೆ ಅವಲಂಭನೆಗೊಂಡ ಕ್ರೈಸ್ತರು ಅವರ ಸಹೋದರತ್ವದ ಪ್ರೀತಿಗೋಸ್ಕರ ವ್ಯಯ ಮಾಡಿದಂತೆ, ವಿಗ್ರಹಗಳಿಗೆ ನೈವೇದ್ಯ ಮಾಡಿದ್ದ ಮಾಂಸವನ್ನು ತಿನ್ನುವದನ್ನು ಸಮರ್ಥಿಸಿಕೊಳ್ಳಬೇಕಾಗಿದೆ. ಸ್ವಭಾವತ ಕ್ರೈಸ್ತನಾಗಿ ಜೀವಿಸುವ, ಸಮುದಾಯದ ದ್ವಂದದಲ್ಲಿರುವ ಕಾರಣ ಅವನು ಅವರನ್ನು ನಿಂದಿಸುತ್ತಾನೆ. ಒಬ್ಬಂಟಿಯಾಗಿ, ಒಬ್ಬೊಬ್ಬರಾಗಿ ಬೆಂಬಲವಾಗಿರುವ ಕ್ರೈಸ್ತ ಧರ್ಮವನ್ನು ಹೊಸ ಒಡಂಬಡಿಕೆಯು ತಿಳಿದಿದೆ.

ಸಮುದಾಯದಲ್ಲಿ ಇತರ ವಿಶ್ವಾಸಿಗಳೊಂದಿಗೆ ಭಾಗವಹಿಸುವವರನ್ನು ಹೊರತು ಪಡಿಸಿ ಯಾರೂ "ಕ್ರಿಸನಲ್ಲಿ" ಇಲ್ಲ. ಕ್ರಿಸ್ತನ ಅನುಯಾಯಿಗಳು ಅಂದರೆ ಒಟ್ಟಾಗಿ ಸಭೆಯು ಆತನ ದೇಹವಾಗಿದೆ (ಎಫೆಸ 1:22, 23). ಸಭೆಯಿಂದ ಬೇರೆಯಾದ ಒಬ್ಬ ಕ್ರೈಸ್ತ ಧರ್ಮದವನು ಮರದಿಂದ ಬೇರ್ಪಡಿಸಿದ ಕೊಂಬೆಯ ಹಾಗೆ (ಯೋಹಾನ 15:1-6); ಅದು ಹಣ್ಣನ್ನು ಕೊಡಲಾರದು. ಆದುದರಿಂದ, ಒಬ್ಬ ವಿಶ್ವಾಸಿಯು ವಿಗ್ರಹಾಲಯದಲ್ಲಿ ಕುಳಿತುಕೊಂಡಾಗ, ಆತನ ಜ್ಞಾನವು ಅಥವಾ ಅದರ ಕೊರತೆಯು ಮಾತ್ರ ಪರಿಗಣಿಸಲ್ಪಡುವದಿಲ್ಲ. ವಯಕ್ತಿಕ ವಿಶ್ವಾಸಿಗಳು ಮಾಡುವದೇನಂದರೆ, ಸಭೆಯ ಮೂಲಕ ಮೌಲೀಕರಿಸುತ್ತಾರೆ. ಕರ್ತನ ಮತ್ತು ವ್ಯಕ್ತಿಯ ಮಧ್ಯದಲ್ಲಿ ಒಬ್ಬನ ನಡವಳಿಕೆಯು ಏಕಮಾತ್ರ ಪ್ರಾಮುಖ್ಯತೆಯಲ್ಲ. ಒಬ್ಬ ಕ್ರೈಸ್ತ ಧರ್ಮದವನ ಕ್ರಮಗಳು ಪೂರ್ಣ ದೇಹದ ಮೇಲೆ ಪರಿಣಾಮ

ಬೀರುತ್ತವೆ.

ಅಲ್ಲದೇ ಅಪೊಸ್ತಲನು ವಿಗ್ರಹಗಳಾಲಯದಲ್ಲಿ ವಿಗ್ರಹಗಳಿಗೆ ನೈವೇದ್ಯ ಮಾಡಿದ ಮಾಂಸವನ್ನು ತಿಂದಿದ್ದಕ್ಕಾಗಿ ಸಭೆಯಲ್ಲಿ ಕೆಲವರನ್ನು ನಿಂದಿಸುತ್ತಾನೆ, ಯಾಕಂದರೆ ಹೀಗೆ ಮಾಡುವದು ಪಿಶಾಚಿಗಳ ಮೇಜಿನಲ್ಲಿ ಭಾಗವಹಿಸಿದಂತೆ. (10:14-21 ನೋಡಿರಿ). ಇಸ್ರಾಯೇಲ್ಯರ ದೀರ್ಘವಾದ ಅನುಭವದಂತೆ ವಿಗ್ರಹಾರಾಧಕರ ಸುತ್ತ ಮುತ್ತ ಇರುವದರ ಪರಿಣಾಮ ವಿಗ್ರಹಗಳನ್ನು ಆರಾಧಿಸುವದನ್ನು ದೃಢಪಡಿಸುತ್ತದೆ. ವಿಗ್ರಹಗಳೊಂದಿಗೆ ಸೂಕ್ಷ್ಮವಾದ ಸಂಧಾನವನ್ನು ಮಾಡಿಕೊಳ್ಳಲು ಸಭೆಯಲ್ಲಿ ಸ್ಥಳವಿಲ್ಲ. ವಿಗ್ರಹಾರಾಧಕರುಗಳೊಂದಿಗೆ ಉಣ್ಣುವ ಅಭ್ಯಾಸವು ಈ ಸಹೋದರರನ್ನು ಇಸ್ರಾಯೇಲ್ಯರು ಅನುಸರಿಸಿದ ದಾರಿಯತ್ತ ಕೊಂಡೊಯ್ಯುತ್ತದೆ. ಪ್ರೀತಿಯು ವಿಶ್ವಾಸಿಗಳಿಗೆ ಅವರ ಒಬ್ಬರೊಂದಿಗೊಬ್ಬರ, ಮತ್ತು ದೇವರೊಂದಿಗಿನ ಸಂಬಂಧಗಳಲ್ಲಿ ಮಾರ್ಗದರ್ಶಿಯಾಗಿದೆ. ಜ್ಞಾನವು ವಿಗ್ರಹಾರಾಧಕರ ಆಚರಣೆಗಳಲ್ಲಿ ಭಾಗವಹಿಸುವ ಯಾವುದೇ ಮಟ್ಟವನ್ನು ಸಮರ್ಥಿಸುವದಿಲ್ಲ ಎನ್ನುವದನ್ನು ಕೊರಿಂಥದವರು ಅರ್ಥ ಮಾಡಿಕೊಳ್ಳಬೇಕೆಂದು ಪೌಲನು ಬಯಸಿದ್ದನು. ಇದು ಕ್ರಿಸ್ತನ ಮೂಲಕ ರಕ್ಷಿಸಲ್ಪಟ್ಟವರಿಗೆ ಸ್ವೀಕರಿಸಲು ಸಾಧ್ಯವಿಲ್ಲದ ನಡತೆಯಾಗಿತ್ತು.

## ಬಲಹೀನ ಸಹೋದರನ ಆತ್ಮಸಾಕ್ಷಿ (8 :7, 8)

1 ಕೊರಿಂಥದಲ್ಲಿ ಅಪೊಸ್ತಲನು ವಿಗ್ರಹಗಳನ್ನು ಪಿಶಾಚಿಗಳ ಪ್ರತಿನಿಧಿ ಎಂದು ವಿವರಿಸಿದ್ದಾನೆ. ಒಂದು ಕ್ಷಣ, ಅವನು ವಿಶ್ವಾಸಿಗಳ ಒಬ್ಬರೊಂದಿಗೊಬ್ಬರ ಮತ್ತು ದೇವರ ಕಡೆಗೆ ಇರುವ ಅವರ ಸಂಭಂದಗಳಲ್ಲಿ ಪ್ರೀತಿಯು ಮಾರ್ಗದರ್ಶಿಯಾಗಿರುವದರ ಬಗ್ಗೆ ಕಾಳಜಿವಹಿಸುತ್ತಾನೆ. ಇಲ್ಲಿ ಅಥವಾ ನಂತರ ಅಪೊಸ್ತಲನು ಕೊರಿಂಥದಲ್ಲಿ ಬಲಶಾಲಿಯಾದ ಮತ್ತು ಬಲಹೀನನಾದ ಕ್ರೈಸ್ತ ಧರ್ಮದವರ ಮಧ್ಯದಲ್ಲಿರುವ ವಿವಾದವನ್ನು ನಿರ್ಣಯಿಸುವದರ ಯಾವುದೇ ಸೂಚನೆಯನ್ನು ಮಾಡಲಿಲ್ಲ. ವಿಗ್ರಹಾರಾಧಕರ ದೇವರುಗಳಿಗೆ ಸಮರ್ಪಿಸುವ ಆಚರಣೆಗಳಲ್ಲಿ ಅವರ ಭಾಗವಹಿಸುವದನ್ನು ಸಮರ್ಥಿಸಿಕೊಳ್ಳುವ ಕೊರಿಂಥದ ವಿಶ್ವಾಸಿಗಳ ಮಧ್ಯದಲ್ಲಿರುವ ಅಂತಹ ಜ್ಞಾನದ ಖ್ಯಾತ ಭಾವನೆಗಳನ್ನು ಎದುರಿಸುವದು ಅವನ ಉದ್ದೇಶವಾಗಿತ್ತು. ಈ ನಡವಳಿಕೆಯು ಅಪೊಸ್ತಲನಿಗೆ ಸ್ವೀಕರಿಸಲು ಅಸಾಧ್ಯವಾಗಿತ್ತು.

**7 ಆದರೆ ಈ ಜ್ಞಾನವು ಎಲ್ಲರಲ್ಲಿಯೂ ಇಲ್ಲ, ಕೆಲವರು ಈ ವರೆಗೂ ವಿಗ್ರಹದ ಬಳಿಗೆ ಹೋಗುವ ರೂಢಿಯಿಲ್ಲದ್ದದರಿಂದ ತಾವು ತಿನ್ನುವ ಪದಾರ್ಥಗಳನ್ನು ವಿಗ್ರಹಕ್ಕೆ ನೈವೇದ್ಯ ಮಾಡಿದ್ದೆಂದು ತಿನ್ನುತ್ತಾರೆ. ಹೀಗೆ ಅವರ ಮನಸ್ಸು ಬಲಹೀನವಾಗಿದ್ದು ಕಲೆಯನ್ನು ಹೊಂದುತ್ತದೆ. 8 ಆದರೆ ಆಹಾರವು ನಮ್ಮನ್ನು ದೇವರ ಸನ್ನಿಧಿಗೆ ಸೇರಿಸಲಾಗದು, ತಿನ್ನದಿದ್ದರೆ ನಮಗೆ ಕಡಿಮೆಯಿಲ್ಲ, ತೊಂದರೆ ನಮಗೆ ಹೆಚ್ಚಿಲ್ಲ.**

**ವಚನ 7. ಹಾಗೂ** ಬಲವಾದ ಗ್ರೀಕ್ ಸಂಯೋಗ ಪದದ *ἀλλά (alla)* ಅನುವಾದ ವ್ಯತ್ಯಾಸವನ್ನು ವ್ಯಕ್ತಪಡಿಸುತ್ತದೆ ಮತ್ತು ಹೆಚ್ಚು ಸಾಮಾನ್ಯವಾಗಿ ಅನುವಾದಿಸಿದ "ಆದರೆ" ಎಂಬ ಪದದ ಅನುವಾದವಾಗಿದೆ. ತನ್ನ ಅಸ್ತಿವಾರವನ್ನು ಹಾಕಿದ ಅಪೊಸ್ತಲನು, ತಾನು

ಸ್ಥಾಪಿಸಿದ್ದರ ಮೇಲೆ ಕಟ್ಟಲು ಸಿದ್ದನಾಗಿದ್ದನು.

ಗತಕಾಲದಿಂದ ದೇವರ ಸಂದೇಶದೊಂದಿಗೆ ಪೌಲನಾಗಲೀ ಅಥವಾ ಕೊರಿಂಥದವರಾಗಲೀ ಭಿನ್ನಾಭಿಪ್ರಾಯಪಟ್ಟಿಲ್ಲ. ದೊಡ್ಡ ಪ್ರವಾದಿಗಳಲ್ಲಿ ಒಬ್ಬನಾದ ಯೆರೆಮೀಯನು ಸಹ ಸುಳ್ಳು ದೇವರುಗಳು ಎಷ್ಟೊಂದು ಅಸಹಾಯಕರೆಂದರೆ ಅವರ ವಿಗ್ರಹಗಳು ಮೇಲಿನಿಂದ ಉರುಳಿ ಬೀಳದಂತೆ ಅವುಗಳನ್ನು ಎತ್ತಿ ಮೊಳೆಗಳಿಂದ ಭದ್ರಪಡಿಸುತ್ತಾರೆ ಎಂದು ತೋರಿಸಿದ್ದಾನೆ. ಇಂಥಾ ಬೊಂಬೆಗಳು ಸೌತೆಯ ತೋಟದ ಬೆದರುಗಂಬದಂತಿವೆ (ಯೆರೆ 10:4, 5). ಕ್ರೈಸ್ತ ಧರ್ಮದವನಿರಲಿ ಅಥವಾ ವಿಗ್ರಹಾರಾಧಕನಿರಲಿ ಯಾರಾದರೂ ಇರಲಿ ಅವರ ಮೇಲೆ ಶಾಪವನ್ನಾಗಲೀ, ಆಶೀರ್ವಾದವನ್ನಾಗಲೀ ತರದೆ ಇರುವ ಅಸಹ್ಯಬರಿಸುವ ವಿಗ್ರಹಗಳ ಹಾಗೇ ಇರದೇ ಭಿನ್ನವಾಗಿರುವವನು ಇಸ್ರಾಯೇಲ್ಯರ ದೇವರು (ಯೆಶಾಯ 45:7; NRSV). ಇದೆಲ್ಲವು ಗೊತ್ತಿದಾಗ್ಯೂ, ಎಲ್ಲವನ್ನು ಸೃಷ್ಟಿಸಿದವನೂ ಮತ್ತು ಕರ್ತನೂ ಆಗಿರುವ ದೇವರ ಏಕತ್ವದ ಬಹಿರಂಗ ಮತ್ತು ವಯಕ್ತಿಕ ಸಾಕ್ಷಿಯನ್ನು ಸ್ಥಿರಿಸುವ ಅಗತ್ಯತೆಯನ್ನು ಕ್ರೈಸ್ತ ಧರ್ಮದವರಿಗೆ ತೊಡೆದು ಹಾಕಲಾಗುವದಿಲ್ಲ. ಸಾಂಕೇತಿಕ ಕ್ರಿಯೆಗಳು ಭಾಗವಹಿಸುವಿಕೆಯ ಮೂಲತತ್ವಗಳಾಗಿವೆ; ಮಾನಸಿಕವಾದ ನಿರ್ಲಿಪ್ತತೆಯು ವಿಗ್ರಹಾಲಯದಲ್ಲಿ ತಿನ್ನುವವರ ಮೂಲಕ ಗ್ರೀಕ್ ಮತ್ತು ರೋಮನ್‌ರ ವಿಗ್ರಹಗಳಿಗೆ ತೋರಿಕೆಯ ಅರ್ಪಣೆಯನ್ನು ರದ್ದುಗೊಳಿಸಲು ಆಗುವದಿಲ್ಲ.

ಜ್ಞಾನವು ವಿಗ್ರಹಾರಾಧಕರ ಆಚರಣೆಗಳಲ್ಲಿ ಭಾಗವಹಿಸುವದನ್ನು ಸಮರ್ಥಿಸುವದಿಲ್ಲ ಯಾಕಂದರೆ ಆ ವಿಷಯ ಕ್ರೈಸ್ತಧರ್ಮದವನ ನೈತಿಕ ಶಕ್ತಿಯಾಗಿದೆ. ಒಂದು ವೇಳೆ ಪೌಲನು ಸಹ ಕೆಲವರು **ಶ್ರೇಷ್ಠವಾದ ಜ್ಞಾನವನ್ನು ಹೊಂದಿದ್ದಾರೆ** ಎಂದು ಒಪ್ಪಿಕೊಂಡರೆ, ಅದು ಸತ್ಯವಾಗಿರುತ್ತದೆ ಯಾಕಂದರೆ ಎಲ್ಲ ಮನುಷ್ಯರು ಈ ಜ್ಞಾನವನ್ನು ಹೊಂದಿರುವದಿಲ್ಲ. ಪ್ರತಿ ವ್ಯಕ್ತಿಯು ತನ್ನ ಕ್ರಿಯೆಗಳು ಇತರರ ಮೇಲೆ ಯಾವ ಪರಿಣಾಮವನ್ನು ಬೀರಬಹುದು ಎಂಬುದನ್ನು ಯೋಚಿಸಬೇಕು. ಪೌಲನು "ಬಲಹೀನನು" ಆಗಿರುವದಕ್ಕೆ ಯಾರನ್ನೂ ಆಪಾದಿಸುವದಿಲ್ಲ. ತಿಳುವಳಿಕೆಯುಳ್ಳ ಜನರು ತಾನು ಮಾಡಿದ ಹಾಗೆಯೇ, ಅಪೊಸ್ತಲನು ಅರಿತುಕೊಂಡಂತೆ, ಒಂದು ವೇಳೆ ಕ್ರಿಸ್ತನನ್ನು ಒಪ್ಪಿಕೊಂಡವನು, ಕ್ರಿಸ್ತನಲ್ಲಿರುವ ಗೌರವಾನ್ವಿತ ಸಹೋದರ ಮತ್ತು ಸಹೋದರಿಯರು ವಿಗ್ರಹಾಲಯದಲ್ಲಿ ನಡೆಸುವ ಧರ್ಮವಿಧಿಗಳಲ್ಲಿ ಭಾಗವಹಿಸುವದನ್ನು ನೋಡಿದರೆ ವಿಗ್ರಹಾರಾಧನೆಯು ಈಗಲೂ ಸ್ವೀಕಾರಾರ್ಹವಾಗಿದೆ ಎಂಬ ತೀರ್ಮಾನಕ್ಕೆ ಬರಬಹುದು. ಜೊತೆಗೆ ವಿಗ್ರಹಾಲಯದಲ್ಲಿ ಊಟಕ್ಕೆ ಕುಳಿತವರು ಕ್ರೈಸ್ತತ್ವದ ಕುರಿತು ಅವಿಶ್ವಾಸಿಗಳ ದೊಡ್ಡದಾದ ಸಮುದಾಯ ಎಂಬ ಹೇಳುವಿಕೆಯು ಅವರ ಸಹ-ವಿಶ್ವಾಸಿಗಳ ಮೇಲೆ ಪರಿಣಾಮ ಬೀರುವದು. ನೋಡುಗರು ಕ್ರಿಸ್ತನು ಕೇವಲ ಪಟ್ಟಣದ ಜೀವಿತದಲ್ಲಿ ಸಂಯೋಜಿಸಿರುವ ಇನ್ನೊಂದು ದೇವತೆ ಎಂಬ ಅಭಿಪ್ರಾಯಕ್ಕೆ ಬರುವ ಸಾಧ್ಯತೆಯಿರುವದು.

ಒಂದು ವೇಳೆ ಜನರು **ವಿಗ್ರಹಕ್ಕೆ ನೈವೇದ್ಯ ಮಾಡಿದ ಆಹಾರ ಎಂದು ಊಟ ಮಾಡುವದನ್ನು ಮುಂದವರೆಸಿದರೆ**, ಒಂದು ವೇಳೆ ಕ್ರೈಸ್ತ ಧರ್ಮದವನನ್ನು ಸಾರವಿಲ್ಲದ ಉದಾಹರಣೆಯಾಗಿ ಇಟ್ಟರೆ,[11] ಅವರು ವೇದನೆ ಅನುಭವಿಸುವರು. ಅವರ **ಆತ್ಮಸಾಕ್ಷಿಯು ಬಲಹೀನವಾಗಿರುವ** ಕಾರಣ ಅಪವಿತ್ರವಾಗುವದು. ನಿಯಮಾಧೀನವಾಗಿ ಕೆಲವು

ನಡವಳಿಕೆಯನ್ನು ಸರಿಪಡಿಸಿಕೊಳ್ಳಲು ಮತ್ತು ಇತರರನ್ನು ಖಂಡಿಸಲು ಇರುವ ಒಳಗಿನ ಸಣ್ಣ ಧ್ವನಿಯೊಂದಿಗೆ ಪೌಲನ "ಆತ್ಮ ಸಾಕ್ಷಿ"ಯ ಉಪಯೋಗವನ್ನು, ಗೊಂದಲ ಪಡಿಸಿಕೊಳ್ಳಬಾರದು. ಮತ್ತೊಬ್ಬ ವ್ಯಕ್ತಿಯು ವಿಗ್ರಹಗಳಾಲಯದಲ್ಲಿ ಮತ್ತೊಬ್ಬ ವ್ಯಕ್ತಿಯು ಊಟದಲ್ಲಿ ಪಾಲ್ಗೊಳ್ಳುವದನ್ನು ನೋಡುವ ಮೂಲಕ ಹೇಗೆ ಒಬ್ಬನ ಆತ್ಮಸಾಕ್ಷಿಯು ಅಪವಿತ್ರಗೊಳುತ್ತದೆ?

ಆತ್ಮಸಾಕ್ಷಿಯು ಮನನೋಯಿಸಬಹುದು, ಆದರೆ ಅದು ಹೇಗೆ ಅಪವಿತ್ರವಾಗುತ್ತದೆ? ಪೌಲನ ಸಮಕಾಲೀನರಿಗಾಗಿ "ಆತ್ಮ ಸಾಕ್ಷಿ" (συνείδησις, *suneidēsis*) ಪ್ರಮುಖವಾದ ಸಾಮಾಜಿಕ ತೊಡಕುಗಳನ್ನು ಹೊಂದಿದೆ. ಶಬ್ಧವು ಅವರ ಮನಸ್ಸುಗಳಿಗೆ "ಆಂತರಿಕ ಬೋಧನೆಯು ಸರಿ ಮತ್ತು ತಪ್ಪುಗಳನ್ನು ಗುರುತಿಸುತ್ತದೆ"[12] (ರೋಮಾ 2:15 ನೋಡಿರಿ). ಆದರೆ ಇದು ಆಂತರಿಕ ಬೋಧನೆಯನ್ನು ಒಪ್ಪಿಕೊಂಡ ಸಮುದಾಯದ ಕುಟುಂಬ ಸದಸ್ಯರಿಗೆ, ನೆರೆಹೊರೆಯವರಿಗೆ, ಮತ್ತು ಸ್ನೇಹಿತರಿಗೆ ಸಹ ಸಲಹೆಯನ್ನು ನೀಡುತ್ತದೆ. ಆತ್ಮಸಾಕ್ಷಿಯು ಇತರರ ಸಮ್ಮತಿ ಅಥವಾ ಅಸಮ್ಮತಿಯನ್ನು: "ಗುಂಪು-ಆಧಾರಿತ ಸಮಾಜದಲ್ಲಿ . . . ಆತ್ಮಸಾಕ್ಷಿಯು ಸಲಹೆಯನ್ನು, ಸಂಪ್ರದಾಯಗಳನ್ನು, ರೂಢಿಗಳನ್ನು, ಪ್ರಶಂಸೆಯನ್ನು, ಮತ್ತು ಒಬ್ಬರೊಂದಿಗೆ ಜೀವಿಸುವ ಸಹ-ಮನುಷ್ಯನ ಖಂಡನೆಯನ್ನು" ಒಳಗೊಂಡಿದೆ.[13]

ದೇವರ ಏಕತ್ವವನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲನಾದ ಒಬ್ಬ ವಿಶ್ವಾಸಿಯು, ಕ್ರೈಸ್ತ ಧರ್ಮದವನು ವಿಗ್ರಹಾಲಯದಲ್ಲಿ ತಿನ್ನುವದನ್ನು ನೋಡಿದಾಗ, ವಿಗ್ರಹಾರಾಧಕರ ದೇವರುಗಳನ್ನು ಆರಾಧಿಸುವದಕ್ಕೋಸ್ಕರ ಸಮಾರಂಭಗಳಲ್ಲಿ ತಾನು ಸ್ವತಃ ಭಾಗವಹಿಸಿರುವದನ್ನು ಸಮ್ಮತಿಸುವದನ್ನು ಅವನು ನೋಡುತ್ತಾನೆ. ಈ ರೀತಿಯಾಗಿ, ಕ್ರೈಸ್ತ ಧರ್ಮದವನು ವಿಗ್ರಹಾಲಯದಲ್ಲಿ ತಿನ್ನುವದನ್ನು ತನ್ನ ಜ್ಞಾನವು ಅನುಮತಿಸುತ್ತದೆ ಎಂದು ಅಧಿಕಾರದಿಂದ ಹೇಳುವ ಮೂಲಕ ಇತರ ವ್ಯಕ್ತಿಯ ಆತ್ಮಸಾಕ್ಷಿಯನ್ನು ಅಪವಿತ್ರಗೊಳಿಸುತ್ತಾನೆ. ಯಾವುದೇ ಸಂಗತಿಗಳಲ್ಲಿಯೂ ಆಹಾರವು ನಮ್ಮನ್ನು ದೇವರ ಸನ್ನಿಧಿಗೆ ಸೇರಿಸಲಾಗದು ಎಂಬುದನ್ನು ಪೌಲನು ಸಮರ್ಥಿಸುತ್ತಾನೆ.

**ವಚನ 8**. ಪೌಲನು "ಊಟ" ಕ್ಕಾಗಿ (βρῶμα, *brōma*) ಆರಿಸಿಕೊಂಡ ಶಬ್ಧವು ಒಂದು ವರ್ಗಕ್ಕೆ ಸೇರಿದ ವಿಶಿಷ್ಟವಾದ ಶಬ್ಧವಾಗಿದೆ; ಪವಿತ್ರ ಮಾಂಸ, ಅಥವಾ ಸಾಮಾನ್ಯ ಮಾಂಸ, ಇದು ನಿರ್ಧಿಷ್ಟವಾದ ವ್ಯಾಖ್ಯಾನವನ್ನು ಹೊಂದಿರುವದಿಲ್ಲ. ಒಬ್ಬ ವಿಶ್ವಾಸಿಯು ಒಂದು ರೀತಿಯಾದ ಊಟವನ್ನು ತಿನ್ನುವಾಗ ಧಾರ್ಮಿಕ ಜೀವಿತದ ಮೇಲೆ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ಅಪೊಸ್ತಲನು ಒಪ್ಪಿಕೊಳ್ಳುತ್ತಾನೆ. **ಒಂದು ವೇಳೆ ನಾವು ತಿನ್ನದಿದ್ದರೆ ನಮಗೆ ಕಡಿಮೆಯಿಲ್ಲ, ಅಥವಾ ನಾವು ತಿಂದರೆ ನಮಗೆ ಹೆಚ್ಚಿಲ್ಲ.** ಅನಂತರದಲ್ಲಿ ಗ್ರೀಕ್-ರೋಮನ್ನರ ಪಟ್ಟಣಗಳಲ್ಲಿ ಮಾಂಸವನ್ನು ತಿನ್ನುವದನ್ನು ವಿಶೇಷ ಸಂದರ್ಭಕ್ಕಾಗಿ ಕಾಯ್ದಿರಿಸುವದು ಒಂದು ಉದ್ಧೇಶವಾಗಿತ್ತು, ವಿಗ್ರಹಾಲಯಕ್ಕೆ ಹೋಗುವದನ್ನು ನಿಲ್ಲಿಸಿದವರು ಯಾವುದೇ ತರದ ಅಥವಾ ಎಲ್ಲಾ ಮಾಂಸ ತಿನ್ನುವದನ್ನು ನಿರಾಕರಿಸಬಹುದು. Jerome Murphy O'Connor ಅವರು ಗ್ರೀಕ್-ರೋಮನ್‌ರ ಜಗತ್ತಿನಿಂದ ವಿಶೇಷವಾದ ಸಮಯಗಳಲ್ಲಿ ಮಾತ್ರ ದೊರಕುವಂತೆ ಸಾಕ್ಷಿಯನ್ನು ನೀಡಿದರು:

> ಕೊರಿಂಥದಲ್ಲಿ ಮತ್ತು ಬೇರೊಂದು ಸ್ಥಳದಲ್ಲಿ, ಮಾಂಸವು ಒಂದೇ ಒಂದು ಸಲ ಅಗ್ಗದ

ದರದಲ್ಲಿ ಪೇಟೆಗೆ ಬಂದ ಸಮಯವೆಂದರೆ ದೊಡ್ಡ ವಿಗ್ರಹಾರಾಧಕರ ಹಬ್ಬಗಳಲ್ಲಿ. ಅಲ್ಲಿ ಅನೇಕ ಅಲ್ಪಾವಧಿಯ ಯಜ್ಞಗಳನ್ನು ಮಾಡುವದರಿಂದ ಭಾಗವಹಿಸುವವರಿಗೂ ಅಥವಾ ಪೂಜಾರಿಗಳಿಗೂ ಆ ಎಲ್ಲಾ ಮಾಂಸವನ್ನು ತಿನ್ನುವದಕ್ಕೆ ಸಾಧ್ಯವಾಗುತ್ತಿರಲಿಲ್ಲ.[14]

ಪೌಲನಿಗೆ ಸಾಮಾಜಿಕ ಸಂದರ್ಭಗಳನ್ನು, ಸಮಾರಾಧನೆಗಳನ್ನು, ಅಥವಾ ಊಟವನ್ನು ಹಂಚಿಕೊಳ್ಳುವ ಸಂದರ್ಭವನ್ನು ಕ್ರೈಸ್ತ ಧರ್ಮದವರಿಂದ ತೆಗೆದುಬಿಡುವ ಬಯಕೆ ಇರಲಿಲ್ಲ. ಅದೇ ಸಮಯದಲ್ಲಿ ಅವನು, ವಿಗ್ರಹಾಲಯದಲ್ಲಿ ತಿನ್ನುವದನ್ನು ನಿರಾಕರಿಸುವದು ಸ್ವಾರ್ಥ ತ್ಯಾಗವನ್ನು ಹಿಸುಕಿಹಾಕಿದಂತೆ ಅಲ್ಲ ಎಂದು ಅವರಿಗೆ ಜ್ಞಾಪಿಸಿದನು. ಅಂತಹ ಮಾಂಸವನ್ನು ತಿನ್ನುವದನ್ನು ಬಿಟ್ಟು ಬಿಡುವದು ಧಾರ್ಮಿಕ ಲಾಭವನ್ನು ಮಾತ್ರ ತರುವಂಥದ್ದಾಗಿದೆ. ವಿಗ್ರಹಾಲಯದಲ್ಲಿ ಊಟ ಮಾಡುವ ಸಂಪ್ರದಾಯಗಳನ್ನು ಬಿಡುವದರಿಂದ ಆಗುವ ನಂತರದ ಯಾವುದೇ ಸಾಮಾಜಿಕ ಅಥವಾ ಆರ್ಥಿಕ ಪರಿಣಾಮಗಳನ್ನು ಆ ಕ್ರೈಸ್ತಧರ್ಮದವರು ಸ್ವೀಕರಿಸಬೇಕು.

ಮದುವೆ ಮತ್ತು ನೈತಿಕತೆಯ ಕುರಿತು ಇರುವ ಪ್ರಶ್ನೆಗಳು ಮಾಂಸವನ್ನು ಈ ರೀತಿಯಾಗಿ ತಿನ್ನುವ ಪ್ರಶ್ನೆಗೆ ಹೋಲಿಕೆಯಾಗಿದೆ. ಲೈಂಗೀಕತೆಯನ್ನು ವ್ಯಕ್ತಪಡಿಸುವದು ಅಥವಾ ಮಾಂಸವನ್ನು ತಿನ್ನುವದು ತಪ್ಪೇನಲ್ಲ. ಸಂದರ್ಭಗಳು ಈ ಕ್ರಿಯೆಗಳನ್ನು ಸರಿ ಅಥವಾ ತಪ್ಪು ಎಂದು ಸಂಪೂರ್ಣವಾಗಿ ಗುರುತಿಸಿವೆ (ಪ್ರಕಟನೆ 2:14 ನೋಡಿರಿ). ಎಚ್ಚರಿಕೆಯಿಂದ ಓದುವದರಿಂದ ಪೌಲನು ಬಲಹೀನ ಮತ್ತು ಬಲವಾದ ಕ್ರೈಸ್ತರ ಮಧ್ಯೆ ವಿವಾದವನ್ನು ಬಗೆಹರಿಸುತ್ತಿಲ್ಲವೆಂದು ಹೆಚ್ಚು ಸ್ಪಷ್ಟ ಪಡಿಸುತ್ತದೆ. ಬದಲಾಗಿ, ಅವನು ಕೇವಲ ವಿಗ್ರಹಾರಾಧನೆಯಾಗಿ ತೋರುವ ಸಂಪ್ರದಾಯಗಳಲ್ಲಿ ಭಾಗವಹಿಸುವದನ್ನು ಸಮರ್ಥಿಸಿಕೊಳ್ಳುದನ್ನು ತಿಳುವಳಿಕೆಗೆ ನಿವೇದಿಸುವವರನ್ನು ಎದುರಿಸುತ್ತಾನೆ.

## ಈ ನಿರ್ಧಾರವು ಎಡವುವ ಬಂಡೆಯಾಗವಾರದು (8:9-13)

**9ಆದರೂ ಈ ನಿಮ್ಮ ಸ್ವಾತಂತ್ರವು ನಂಬಿಕೆಯಲ್ಲಿ ಬಲವಿಲ್ಲದವರಿಗೆ ಒಂದು ವೇಳೆ ವಿಘ್ನವಾದೀತು ಎಚ್ಚರಿಕೆಯಾಗಿರಿ. 10ಜ್ಞಾನಿಯಾದ ನೀನು ವಿಗ್ರಹಾಲಯದಲ್ಲಿ ಊಟಕ್ಕೆ ಕೂತಿರುವಾಗ ನಿರ್ಬಲವಾದ ಮನಸ್ಸುಳ್ಳ ಸಹೋದರನು ಕಂಡರೆ ಅವನೂ ವಿಗ್ರಹಕ್ಕೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನುವದಕ್ಕೆ ಧೈರ್ಯತಂದು ಕೊಂಡಾನಲ್ಲವೇ. 11ಹೀಗೆ ಆ ಬಲಹೀನನು ನಿನ್ನ ಜ್ಞಾನದಿಂದ ನಾಶವಾಗುತ್ತಾನೆ ಅವನು ಸಹೋದರನಲ್ಲವೇ. ಅವನಿಗಾಗಿಯೂ ಕ್ರಿಸ್ತನು ತನ್ನ ಪ್ರಾಣಕೊಟ್ಟನಲ್ಲವೇ. 12ಹೀಗಿರಲಾಗಿ ಸಹೋದದರಿಗೆ ಪಾಪ ಮಾಡಿ ಅವರ ನಿರ್ಬಲವಾದ ಮನಸ್ಸನ್ನು ನೋಯಿಸಿ ಕ್ರಿಸ್ತನಿಗೆ ಪಾಪಮಾಡುವವರಾಗುತ್ತೀರಿ. 13ಆದುದರಿಂದ ಭೋಜನ ಪದಾರ್ಥದಿಂದ ನನ್ನ ಸಹೋದರನಿಗೆ ವಿಘ್ನವಾಗುವದಾದರೆ ನಾನು ಎಂದಿಗೂ ಮಾಂಸವನ್ನು ತಿನ್ನುವದಿಲ್ಲ; ನಾನು ನನ್ನ ಸಹೋದರನಿಗೆ ವಿಘ್ನವನ್ನುಂಟು ಮಾಡಬಾರದಲ್ಲಾ.**

**ವಚನ 9.** ಅಪೊಸ್ತಲನು ಸ್ಪೂರ್ತಿಯಿಂದ ನ್ಯಾಯಯುತವಾದ ಅಂಶವನ್ನು 8:8ರಲ್ಲಿ ಒಪ್ಪಿಕೊಳ್ಳುವಂತೆ, ಅವನು ತನ್ನ ಓದುಗರು ಇತರ ಪ್ರಮುಖ ವಿಷಯಾಂಶಗಳ ಪ್ರಶ್ನೆಯನ್ನು ಗಮನಿಸುವದರ ಕಡೆಗೆ ವಿಫಲರಾದದ್ದನ್ನು ಹೇಳುತ್ತಾ ಹೋಗುತ್ತಾನೆ. ಒಂದಲ್ಲಾ ಒಂದು

ರೀತಿಯಿಂದ, ಆಹಾರವು ವಿಶ್ವಾಸಿಗಳನ್ನು ದೇವರ ಸನ್ನಿಧಿಗೆ ಸೇರಿಸಲಾರದು ಎಂಬುದು ಸತ್ಯವಾದದ್ದು. ಒಬ್ಬನು ತಿನ್ನುವದು ಅಥವಾ ತಿನ್ನದೇ ಇರುವದು, ದೈವಭಕ್ತಿಯ ಮೇಲೆ ಏನೂ ಪರಿಣಾಮ ಬೀರುವದಿಲ್ಲ, ಆದರೆ **ಸ್ವಾತಂತ್ರ** ಮತ್ತು ಅಧಿಕಾರದ (ἐξουσία, *exousia*) ಮನವಿಯು, ಇತರರಿಗಾಗಿ ಪ್ರೀತಿಯನ್ನು ಸ್ವಚ್ಛಂದವಾಗಿ ನಡೆಸಬಾರದು (8:1). "ಸ್ವಾತಂತ್ರ" ವನ್ನು **ಬಳಕೆ ಮಾಡುವಾಗ, ಅದು ಬಲಹೀನನಿಗೆ ಮುಗ್ಗರಿಸುವ ಅಡತಡೆಯಾಗಬಾರದು**, ಒಬ್ಬನು ತಾನು ಶ್ರೇಷ್ಠವಾದ ಜ್ಞಾನ ಹೊಂದಿಲ್ಲ ಎಂಬುದನ್ನು ಗುರುತಿಸಿಕೊಳ್ಳಬೇಕು. ಯಾವುದೇ ಕ್ರೈಸ್ತಧರ್ಮದವನು ತಾನು ಏನು ಮಾಡುತ್ತಿರುವನೋ ಅದನ್ನು ಮಾಡುವದಕ್ಕೆ ತನಗೆ ಅಧಿಕಾರವಿದೆ ಎಂದು ಪ್ರತಿಪಾದಿಸುವ ಮೂಲಕ ಸಮರ್ಥಿಸಿಕೊಂಡರೆ, ವಿಶೇಷವಾಗಿ ಅದು ವಿಶ್ವಾಸಿಗಳ ನಂಬಿಕೆಯನ್ನು ದುರ್ಬಲಗೊಳಿಸಿ ಮತ್ತು ಐಕ್ಯತೆಯನ್ನು ಕೆಡಿಸುವುದಾದರೆ, ಅದು ಪ್ರೀತಿಯು ಸಮಸ್ಯೆಯನ್ನು ಹೊಂದಿದೆ ಎಂದು ಅರ್ಥ.

**ವಚನ 10.** ಕೊರಿಂಥದ ಕ್ರೈಸ್ತ ಧರ್ಮದವರು ತಮಗಿರುವ ವಿಗ್ರಹದ ಜ್ಞಾನವು ನಿಷ್ಪ್ರಯೋಜಕ, ವಿಗ್ರಹಾರಾಧನೆಯ ವಿರುದ್ಧವಾಗಿ ಅವರನ್ನು ಅವಮಾನಪಡಿಸಿದೆ ಎಂದು ದೃಢವಾಗಿ ಹೇಳುವಾಗ, ಅವರು ವಿಗ್ರಹಾರಾಧನೆಯು ಅಲ್ಪ ಬುದ್ದಿಯುಳ್ಳದ್ದೆಂದು ಅರ್ಥೈಸಿಕೊಂಡಿದ್ದಾರೆ ಎಂದು ಪೌಲನು ಹೇಳುತ್ತಾನೆ. ಆದಾಗ್ಯೂ ಒಂದು ವೇಳೆ ಅವರ ವಾದಗಳು ತಾತ್ವಿಕ ಮೌಲ್ಯವನ್ನು ಹೊಂದಿದ್ದರೆ, ಅವರ ಅಭ್ಯಾಸವು ಬಲಹೀನ ಸಹೋದರರನ್ನು ಮತ್ತು ಸಹೋದರಿಯರನ್ನು ವಿಗ್ರಹಗಳನ್ನು ಆರಾಧಿಸುವದಕ್ಕೆ ಪ್ರೋತ್ಸಾಹಿಸುವದಾಗಿದ್ದರೆ, ಕೆಲವರು ಕ್ರಿಸ್ತನನ್ನು ರಕ್ಷಕನಾಗಿ ಅಂಗೀಕರಿಸಿಕೊಂಡಿದ್ದರೆ ಮತ್ತು ಆತನಿಗೆ ದಿಕ್ಷಾಸ್ನಾನದಲ್ಲಿ ವಿಧೇಯರಾಗಿ, ಪಶ್ಚಾತ್ತಾಪದೊಂದಿಗೆ ಹೋರಾಟವನ್ನು ಮುಂದುವರಿಸಿದ್ದರೆ: ಅವರು ವಿಗ್ರಹಾರಾಧಕರ ಸಾಲಿನಿಂದ ಬೇರ್ಪಟ್ಟು ಸತ್ಯವುಳ್ಳ ದೇವರನ್ನು ಆರಾಧಿಸುವಲ್ಲಿ ಹತ್ತಿರವಾಗಿದ್ದಾರೆ. ಜಗತ್ತಿನಲ್ಲಿ ಕಾರ್ಯಪ್ರವೃತ್ತರಾದ ವಿಗ್ರಹಾರಾಧಕರ ಮತ್ತು ದೇವರುಗಳ ಶಕ್ತಿಯನ್ನು ಜಯಿಸುವದು ಸುಲಭಸಾಧ್ಯವಲ್ಲ ಎಂಬ ನಂಬಿಕೆಯಿದೆ. ಕ್ರಿಸ್ತನನ್ನು ಹಿಂಬಾಲಿಸಿದರೆ ಜಗತ್ತಿನೊಂದಿಗೆ ಮುಖಾಮುಖಿಯಾಗುವದನ್ನು ತಪ್ಪಿಸುತ್ತದೆ ಎಂದು ಅಪೊಸ್ತಲನಾದ ಪೌಲನು ಭರವಸೆಯನ್ನು ಕೊಡಲಿಲ್ಲ. ವಿಗ್ರಹಾಲಯದಲ್ಲಿ ಸಹ-ಕ್ರೈಸ್ತಧರ್ಮದವನು ಊಟ ಮಾಡುವದನ್ನು ನೋಡುವಾಗ, ಬಲಹೀನ ಸಹೋದರನು ದೇವರ ಸಾರ್ವಭೌಮತ್ವವನ್ನು ಮತ್ತು ಪವಿತ್ರತೆಯನ್ನು ಸಂಧಾನ ಮಾಡಿಕೊಳ್ಳುವಂತೆ ಹುರಿದುಂಬಿಸುವ ದೃಶ್ಯವನ್ನು ಅವರು ಗ್ರಹಿಸುತ್ತಾರೆ. ಯಾರು ತಮ್ಮಷ್ಟಕ್ಕೆ ತಾವು ಜ್ಞಾನವಂತರು ಎಂದು ಆಲೋಚಿಸಿಕೊಳ್ಳುತ್ತಾರೋ ಅವರು "ಬಲಹೀನ" ಸಹೋದರನನ್ನು ತಪ್ಪು ದಾರಿಗೆ ಎಳೆಯುವ ಮೂಲಕ ಮತ್ತು ತಾವು ನಂಬಿದ್ದನ್ನು ಸಂಧಾನ ಮಾಡಿಕೊಳ್ಳುವದಕ್ಕೆ ತಾವು ಕಾರಣವಾಗುವ ಮೂಲಕ ಅವರ ಆತ್ಮಸಾಕ್ಷಿಯನ್ನು ಅಪವಿತ್ರಗೊಳಿಸುತ್ತಾರೆ. ತಮ್ಮ ಜ್ಞಾನದ ಹಿಂದೆ ಅಡಗಿಸಿಕೊಂಡಿರುವ ಅವರ ನಡವಳಿಕೆಯು ವಿಗ್ರಹಾರಾಧನೆಯ ಸಮಾರಾಧನೆಗಳಲ್ಲಿ ಭಾಗವಹಿಸುವದಕ್ಕೆ ಇತರರನ್ನು **ಬಲಪಡಿಸುತ್ತದೆ** (οἰκοδομηθήσεται, *oikodomēthēsetai*). ಕ್ರಿಯಾಪದದೊಂದಿಗೆ, ಭವಿಷತ್ತಿನ ಕರ್ಮಣಿ ಕ್ರಿಯಾರೂಪದ ಪೌಲನ ಹೇಳಿಕೆ, ವಾಸ್ತವಿಕವಾಗಿ, "ಅದು [ಮನಸಾಕ್ಷಿ] ಕಟ್ಟಲ್ಪಟ್ಟಿದೆ" ಎಂದು ಅರ್ಥ ಬಲಹೀನ ಸಹೋದರನಲ್ಲಿ **ವಿಗ್ರಹಗಳಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು**

**ತಿನ್ನವದು.**

**ವಚನ 11.** ನಿತ್ಯತ್ವದ ಆಲೋಚನೆಗಳು ಎಂದಿಗೂ ಪೌಲನ ಮನಸ್ಸಿನಿಂದ ದೂರವಾಗಿಯೇ ಇಲ್ಲ. ಅವನು ಅನೇಕ ಸಲ ಪ್ರಾಪಂಚಿಕ ಭೂಸಂಬಂಧಿತ ವಿಷಯಗಳಿಂದ ತನ್ನ ದೃಷ್ಟಿಯನ್ನು ದೇವರ ತೀರ್ಪಿನ ಕಡೆಗೆ ತಿರುಗಿಸುತ್ತಿದ್ದನು, "ಯಾಕಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾದ ಪ್ರತಿಫಲವನ್ನು ಹೊಂದುವದಕ್ಕೋಸ್ಕರ" (2 ಕೊರಿಂಥ 5:10). 1 ಕೊರಿಂಥ 8:11ರ ಪ್ರಕಾರ, ತೀರ್ಪಿನ ದಿನದಲ್ಲಿ, ವಿಗ್ರಹಾಲಯದಲ್ಲಿ ಮಾಂಸವನ್ನು ತಿನ್ನುವದನ್ನು ಸಮರ್ಥಿಸಿಕೊಳ್ಳುವದಕ್ಕೆ ಇತರರ ಜ್ಞಾನದಲ್ಲಿ ನಂಬಿಕೆಯಿಟ್ಟಿರುವ ಪೂರ್ವಕಲ್ಪಿತ ಬಲಹೀನ ಕ್ರೈಸ್ತ ಧರ್ಮದವನು ನಾಶವಾಗುವನು. ಅಪೊಸ್ತಲನು ಸಹೋದರನ ನಾಶನದ ಕ್ರಿಯಾ ಪದವನ್ನು "ನಾಶವಾಗುತ್ತಾನೆ" (*ἀπόλλυται, apollutai*) ಎಂದು ಇರಿಸುವ ಮೂಲಕ ಉಪವಾಕ್ಯದಲ್ಲಿ ಒತ್ತಿ ಹೇಳುತ್ತಾನೆ. ಅಲ್ಲದೇ, ಅವನು **ಒಬ್ಬ ಸಹೋದರನ ಕುರಿತು ಮಾತನಾಡುತ್ತಾ ಅವನಿಗಾಗಿ ಕ್ರಿಸ್ತನು ಪ್ರಾಣಕೊಟ್ಟನು** ಎಂದು ಸಹ ಒತ್ತಿ ಹೇಳುತ್ತಾನೆ. **ನಿನ್ನ** (*σός, sos*) ಎಂಬ ಪದವು ಬಲವಾದ ಸ್ವಾಮ್ಯಸೂಚಕ ಸರ್ವನಾಮವಾಗಿದೆ. ವಿಗ್ರಹಾರಾಧನೆಯನ್ನು ತನ್ನದೆಂದು ಸಮರ್ಥಿಸುವ ಅವರ ಜ್ಞಾನದ ಸಲುವಾಗಿ, "ಕ್ರಿಸ್ತನು ಪ್ರಾಣಕೊಟ್ಟದ್ದರ ಉದ್ದೇಶವನ್ನು ನಿಮ್ಮ **ಜ್ಞಾನವು** ನಿರಾಕರಿಸುವದಕ್ಕೆ ಅನುಮತಿಸಲು ನೀವು ಸಿದ್ಧರಿದ್ದೀರಾ?" ಎಂಬುದು ಪೌಲನ ಸೂಚ್ಯ ಪ್ರಶ್ನೆಗಳಾಗಿವೆ. ನಿಮ್ಮ ಖಂಡಿತವಾದ ಮಾತುಗಳಲ್ಲಿ ನಿಮ್ಮ ಹಕ್ಕುಗಳ ಅರ್ಥ ನಿಮಗೆ ಹೆಚ್ಚಾದದ್ದೋ? ನಿಮ್ಮ ನಾಶನದ ಅರ್ಥ ಅತೀ ಕಡಿಮೆಯಾದದ್ದೋ? ಯಾರಾದರೂ ತಮ್ಮ ವಯಕ್ತಿಕ ಆಸಕ್ತಿಗಳನ್ನು ಕ್ರಿಸ್ತನ ದೇಹದ ಸುಸ್ಥಿತಿ ಮೇಲೆ ಇರಿಸಲು ಧೈರ್ಯ ಮಾಡಲು ಸಾಧ್ಯವೋ?

**ವಚನ 12.** ದೇವರೊಂದಿಗಿನ ಕ್ರೈಸ್ತನ ಸಂಬಂಧವು, ಕ್ರಿಸ್ತನ ದೇಹದ ಇತರ ಸದಸ್ಯರೊಂದಿಗೆ ಅವನ ಸಂಬಂಧವು ಬಂಧಿಸಲ್ಪಟ್ಟಿದೆ ಎಂಬುದನ್ನು ಪೌಲನು ತೋರಿಸುತ್ತಾನೆ. ಸಭೆಯು ದೇವರ ಜನರ ಸಮುದಾಯಕ್ಕೆ ಸಮನಾಗಿರುತ್ತದೆ (ಕೊಲಸ್ಸೆ 1:24). ಹೊಸ ಜೀವನ ಶೈಲಿಯು ಪರಿವರ್ತನೆಯ ಪರಿಣಾಮವಾಗಿದೆ. **ಸಹೋದರನ ವಿರುದ್ಧವಾಗಿ ಪಾಪ ಮಾಡುವ ಮತ್ತು ಅವರ ಆತ್ಮಸಾಕ್ಷಿಯನ್ನು ನೋಯಿಸುವದರ ಮೂಲಕ**, ನೀವು ಕ್ರಿಸ್ತನ ವಿರುದ್ಧವಾಗಿ ಪಾಪ ಮಾಡುವವರಾಗಿದ್ದೀರಿ, ಎಂದು ಪೌಲನು ಹೇಳುತ್ತಾನೆ.

ಅಪೊಸ್ತಲನು ತನ್ನ ದಮಸ್ಕದ ದಾರಿಯಲ್ಲಿನ ತನ್ನ ಅನುಭವವನ್ನು ನೆನೆಪಿಸಿಕೊಳ್ಳಬಹುದು. ಅವನು "ಕರ್ತನ ಶಿಷ್ಯರ ವಿರುದ್ಧವಾಗಿ ಕೊಲೆಯ ಬೆದರಿಕೆಗಳನ್ನು ಹಾಕುತ್ತಿದ್ದನು" (ಅ.ಕೃ. 9:1). ದೇವರು ಅವನಿಗೆ ಕಾಣಿಸಿಕೊಂಡಾಗ, ಆತನು, ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸೆ ಪಡಿಸುತ್ತೀ? ಎಂದು (ಅ.ಕೃ. 9:4), ಎಂದು ಕೇಳಿದನು. ಸಹೋದರನ ಆತ್ಮಸಾಕ್ಷಿಯನ್ನು ನೋಯಿಸುವದು ಅಥವಾ ಅವನ "ವಿರುದ್ಧವಾಗಿ ಪಾಪಮಾಡುವದು," ಕ್ರಿಸ್ತನ ವಿರುದ್ಧವಾಗಿ ಪಾಪ ಮಾಡಿದಂತೆ. ಕ್ರಿಸ್ತನ ದೇಹವನ್ನು ಕಟ್ಟುವ ಯಾವುದೇ ಆಗಿರಲಿ ಅದನ್ನು ಕ್ರಿಸ್ತನು ಗೌರವಿಸುತ್ತಾನೆ ವ್ಯತಿರಿಕ್ತವಾದದ್ದು ಸಹ ಸತ್ಯ.

**ವಚನ 13.** "ನಾನೂ ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು" (ಯೆಹೋ 24:15ಬ) ಎನ್ನುವದು ಯೆಹೋಶುವನ ಪ್ರತಿಜ್ಞೆಯ ಶಕ್ತಿಯಾಗಿದೆ. **ಒಂದು ವೇಳೆ ಆಹಾರವು ನನ್ನ ಸಹೋದರನು ಮುಗ್ಗರಿಸುವದಕ್ಕೆ ಕಾರಣವಾಗುವದಾದರೆ, ನಾನು ಮಾಂಸವನ್ನು**

**ತಿರುಗಿ ಎಂದಿಗೂ ತಿನ್ನುವದಿಲ್ಲ**, ಎಂದು ಪೌಲನು ಘೋಷಿಸುತ್ತಾನೆ. ಅಪೊಸ್ತಲನಿಗೆ, ಹಕ್ಕುಗಳನ್ನು ಪ್ರತಿಪಾದಿಸುವದಕ್ಕಿಂತ "ಸಹೋದರನು ಮುಗ್ಗರಿಸುವದಕ್ಕೆ" ಕಾರಣರಾಗದಂತೆ ಎಚ್ಚರಿಕೆಯಾಗಿರುವದು ಹೆಚ್ಚು ಪ್ರಾಮುಖ್ಯವಾಗಿದೆ, ಒಂದು ವೇಳೆ ಆ ಹಕ್ಕುಗಳು ಶ್ರೇಷ್ಠವಾದ ಜ್ಞಾನಕ್ಕೆ ಮನವಿ ಮಾಡುವ ಮೂಲಕ ಸಹ ಸಮರ್ಥಿಸಬಹುದಾಗಿದೆ. ತನ್ನ ಉದಾಹರಣೆಯನ್ನು ಅನುಸರಿಸುವದು ಅವನ ಉದ್ದೇಶವಾಗಿತ್ತು. ಪೌಲನು ವಯಕ್ತಿಕವಾಗಿ; ಒಬ್ಬ ಅಪೊಸ್ತಲನಾಗಿ ಮತ್ತು ಒಬ್ಬ ಬೋಧಕನಾಗಲು ಸಿದ್ದನಿದ್ದನು, ಹಾಗೂ ಧಾರ್ಮಿಕ ಗುರುವಾಗಿ ತನ್ನ ಜಮಾಬ್ದಾರಿಯನ್ನು ಅಂಗೀಕರಿಸಿದ್ದನು. ಅದೇ ಸಮಯದಲ್ಲಿ, ಪ್ರತಿ ಕ್ರೈಸ್ತಧರ್ಮದವನು ಹೇಗೆ ಜೀವಿಸಬೇಕು ಎನ್ನುವದರ ಕುರಿತು ಅವನ ಅಥವಾ ಅವಳ ಮನಸ್ಸನ್ನು ಸಿದ್ಧ ಮಾಡಿಕೊಳ್ಳಬೇಕು ಎನ್ನುವದನ್ನು ಅವನು ಗುರುತಿಸಿದ್ದನು.

ಅಪೊಸ್ತಲನ ದಿಟ್ಟ ನಿಲುವು ಅವನ ಸಿದ್ಧಾಂತಗಳಿಗೆ ಆಧಾರವಾಗಿರುವ ಪ್ರಮೇಯದ ಸಂದರ್ಭದಲ್ಲಿ: ವಿಗ್ರಹಾಲಯದಲ್ಲಿ ಮಾಂಸವನ್ನು ತಿನ್ನುವದು ವಿಗ್ರಹಾರಾಧನೆಯೇ. ಬಲಹೀನ ಸಹೋದರನು ನೋಡುವ ಮೂಲಕವೂ ಅಥವಾ ನೋಡದೆ ಇದ್ದರೂ, ಅದು ಪಾಪ. ಕೊರಿಂಥದಲ್ಲಿ ಕೆಲವರು ವಿಗ್ರಹಾಲಯದಲ್ಲಿ ಊಟಮಾಡುವದನ್ನು ಬಿಟ್ಟು ಬಿಡುವದು ಅವರಿಗೆ ಅನವಶ್ಯಕವಾಗಿ ಕಷ್ಟಕರವಾದ ಪರಿಸ್ಥಿತಿ ಎಂದು ವಾದಿಸುತ್ತಾ ವಿಷಯವನ್ನು ಒತ್ತಿ ಹೇಳುವದು ಕಂಡುಬರುತ್ತದೆ. ಏನಿದ್ದರೂ, ವಿಗ್ರಹವು ಏನೂ ಅಲ್ಲ ಎಂದು ಅವರಿಗೆ ತಿಳಿದಿದೆ. ವಿಗ್ರಹದಿಂದ ಮಾನಸಿಕವಾಗಿ ದೂರವಿರುವದನ್ನು ವಿಗ್ರಹಾರಾಧನೆಯ ಲಕ್ಷಣವನ್ನು ನಿರೂಪಿಸುವದಿಲ್ಲ ಎಂದು ಪೌಲನು ಪ್ರತಿಕ್ರಿಯಿಸುತ್ತಾನೆ. ಅಪೊಸ್ತಲನು, ಅವನಿಗಿಂತ ಮುಂಚಿನ ಪ್ರವಾದಿಗಳ ಹಾಗೇ, ವಿಗ್ರಹಾರಾಧನೆಯೊಂದಿಗೆ ಯಾವುದೇ ಸಂಧಾನ ಮಾಡಿಕೊಳ್ಳುವದನ್ನು ಅನುಮತಿಸಲು ನಿರಾಕರಿಸುತ್ತಾನೆ.

ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವಲ್ಲಿ ಅಚಲರಾಗಿರುವವರಿಗೋಸ್ಕರ, ಪೌಲನು ತನ್ನ ಎರಡನೆಯ ಪರಿಗಣನೆಯ ಕಡೆಗೆ ತಿರುಗಿಸುತ್ತಾನೆ. ತನ್ನಲ್ಲಿ ಜ್ಞಾನವಿದೆ ಎಂದು ವಿಗ್ರಹಾಲಯದಲ್ಲಿ ಮಾಂಸವನ್ನು ತಿನ್ನುವವನು ತಮಗಿಂತ ಜ್ಞಾನದಲ್ಲಿ ಕಡಿಮೆಯಿರುವವರಿಗೆ ವಿಗ್ರಹಾರಾಧಕರಾಗುವದಕ್ಕೆ ಪ್ರೋತ್ಸಾಹಿಸುವವರಾಗಿದ್ದಾರೆ. ಅವರು ವಿಗ್ರಹಗಳಿಗೆ ಅರ್ಪಿಸುವ ಸಮಾರಂಭಗಳಲ್ಲಿ ಭಾಗವಹಿಸುವದಕ್ಕಿಂತ ಮೊದಲು ಅವರ "ಬಲಹೀನ" ಸಹೋದರನಿಗಾಗಿ ಕ್ರಿಸ್ತನು ಪ್ರಾಣಕೊಟ್ಟ ಅವನಿಗಾಗಿ ಭಾಗವಹಿಸದಂತೆ ಸ್ವಲ್ಪ ಯೋಚಿಸಬೇಕು.

ನಾವು ಅವನ ಸಂದೇಶವನ್ನು ಕ್ರಿಸ್ತನ ಸಭೆಯೊಳಗೆ ದಿನ ನಿತ್ಯದ ಜೀವಿತದಲ್ಲಿ ಅಳವಡಿಸಿಕೊಳ್ಳುವದಕ್ಕೆ ಸಿದ್ದರಾಗುವಾಗ ಪೌಲನ ಇಬ್ಭಾಗಿಸುವಿಕೆಯ ವಿಧಾನವನ್ನು ನೆನಪಿಸಿಕೊಳ್ಳುವದು ಪ್ರಾಮುಖ್ಯವಾಗಿದೆ. ಬಲಹೀನ ಸದಸ್ಯರ ನೈತೀಕ ನಡತೆಯನ್ನು ಸಭೆಯು ಪ್ರಕಟಿಸಬೇಕು ಎಂಬುದನ್ನು ಅಪೊಸ್ತಲನು ನಿರ್ವಹಿಸಲಿಲ್ಲ. ಬದಲಾಗಿ, ಅವನು ಬಲಶಾಲಿಯಾದ ಕ್ರೈಸ್ತಧರ್ಮದವರು ಬಲಹೀನನ ಆತ್ಮಸಾಕ್ಷಿಯನ್ನು ಪರಿಗಣಿಸಬೇಕೆಂದು ಪ್ರತಿಪಾದಿಸಿದ್ದಾನೆ.

# ಅಳವಡಿಸಿಕೊಳ್ಳುವದು

## ಜ್ಞಾನ ಮತ್ತು ಸಂಧಾನ

ಪೌಲನಿಗೆ ವಿಗ್ರಹಾರಾಧನೆಯೊಂದಿಗೆ ಸಂಧಾನ ಮಾಡಿಕೊಳ್ಳುವದು ಯೋಚಿಸಲಾಗದ ವಿಷಯವಾಗಿದೆ. ವಿಗ್ರಹಗಳನ್ನು ಆರಾಧಿಸುತ್ತಿದ್ದವರ ಮಧ್ಯದಲ್ಲಿ, ಸುಳ್ಳು ದೇವರಿಗೆ ನೈವೇದ್ಯ ಮಾಡಿದ ಮಾಂಸವನ್ನು, ದೇವರನ್ನು ಪೂಜಿಸುವವರೊಂದಿಗೆ ಹಂಚಿಕೊಳ್ಳುವದೂ, ವಿಗ್ರಹಾರಾಧನೆ. ಜ್ಞಾನದ ಯಾವ ಅಳವಡಿಕೆಯೂ ಅದನ್ನು ಬದಲಾಯಿಸಲಾಗದು. ಪ್ರಮಾಣಾನುಗುಣವಾದ ಹೇಳಿಕೆಗಳನ್ನು ಸ್ವೀಕರಿಸಬಹುದು: ಭೂಮಿಯು ಸೂರ್ಯನ ಸುತ್ತಲೂ ತಿರುಗುತ್ತದೆ. ಸಂಗತಿಗಳು ಪ್ರತಿ ಇತರ ಸಂಗತಿಯೊಂದಿಗೆ ಸಮನಾಗಿದ್ದರೆ ಅದೇ ರೀತಿಯಾದ ಸಂಗತಿಗಳು ಸಮನಾಗಿರುತ್ತವೆ. ಈ ಸತ್ಯಗಳನ್ನು ಪ್ರಮಾಣಾನುಗುಣವಾದ ಹೇಳಿಕೆಗಳೊಳಗೆ ಸ್ಪಷ್ಟವಾಗಿರಸಲ್ಪಟ್ಟಿವೆ. ಧಾರ್ಮಿಕ ಮತ್ತು ನೈತಿಕ ಹೇಳಿಕೆಗಳು ಸ್ಪಷ್ಟವಾಗಿ ಸೂತ್ರರೂಪದಲ್ಲಿ ವ್ಯಕ್ತಗೊಳಿಸಲ್ಪಟ್ಟಿರು ಸಾಧ್ಯತೆಯಿದೆಯೋ? ಆಧುನಿಕ ಜಗತ್ತಿನ ಉತ್ತರಗಳು ಹೆಚ್ಚಾಗಿ, "ಇಲ್ಲ:" ಎಂದಾಗಿವೆ. ಪೌಲನು ನಿಸಂದೇಹವಾಗಿ "ಹೌದು" ಎಂದು ಉತ್ತರ ಕೊಟ್ಟಿದ್ದಾನೆ. ವಿಗ್ರಹಾರಾಧನೆಯು ತಪ್ಪು-ಅವಧಿ! "ವಿಗ್ರಹಾರಾಧನೆಯಿಂದ ಪಲಾಯನ ಮಾಡಿರಿ" (10:14) ಎಂಬ ಅವನ ಬುದ್ಧಿವಾದಕ್ಕೆ ಯಾವ ಅರ್ಹತೆಗಳು ಬೇಕಾಗಿಲ್ಲ .

ಧಾರ್ಮಿಕತೆ ಮತ್ತು ನೈತಿಕತೆಯಲ್ಲಿ, ದೇವರ ಅಧಿಕಾರವು ಸತ್ಯವೆಂದು ದೃಢೀಕರಿಸುವಾಗ ಪ್ರಮಾಣ ಗುಣವಾದ ಹೇಳಿಕೆಯು ವ್ಯವಸ್ಥಿತವಾಗಿರುತ್ತದೆ. ಮಾನುಷ ಜ್ಞಾನಕ್ಕೆ ಮಿತಿಯಿರುತ್ತದೆ. ದೇವರು ತಾನಾಗಿಯೇ ಇದನ್ನು ಹೇಳಿದಾಗ, ಮನುಷ್ಯನಿಗೆ ವಿಧೇಯತೆಯಲ್ಲದೇ ಬೇರೆ ಆಯ್ಕೆಯಿಲ್ಲ (ಧರ್ಮೋ 6:4).

ಜಗತ್ತು ನೈತಿಕ ಮಿತಿಯನ್ನು ಹೊಂದಿದೆ. ಪೇತ್ರನು ಈ ಪ್ರಮೇಯದಲ್ಲಿ ನೈತಿಕ ಮತ್ತು ಧಾರ್ಮಿಕ ಬುದ್ದಿವಾದಗಳನ್ನು ಕಂಡು ಕೊಂಡನು: ದೇವರು ಪರಿಶುದ್ಧನು, ಆದುದರಿಂದ, ಆತನ ಜನರು ಸಹ ಪಪರಿಶುದ್ಧರಾಗಿರಬೇಕು (1 ಪೇತ್ರ 1:13-16 ನೋಡಿರಿ). ದೇವರ ಅಸ್ತಿತ್ವವನ್ನು ನಿರಾಕರಿಸುವದು, ಮನುಷ್ಯನ ವಿಷಯಗಳಲ್ಲಿ ಆತನ ಒಳಗೊಳ್ಳುವಿಕೆ, ಅಥವಾ ಸೃಷ್ಟಿಗೋಸ್ಕರವಿರುವ ಆತನ ಪ್ರೀತಿ, ಇದೆಲ್ಲದರ ನೈತಿಕ ಮಿತಿಯನ್ನು ಮನುಷ್ಯಕುಲವು ಕಿತ್ತುಕೊಂಡಿದೆ. ಕಳ್ಳತನ ಮತ್ತು ಕೊಲೆ ಇವುಗಳನ್ನು ಮಾಡುವದು ತಪ್ಪು ಎಂಬ ತನ್ನ ಹೇಳಿಕೆಯನ್ನು ಸಮರ್ಥಿಸುವ ಯಾವ ಆಧಾರವು ನಾಸ್ತಿಕನಿಗೆ ಇಲ್ಲ. ಅತ್ಯುತ್ತಮವಾದದ್ದೇನಂದರೆ, ಅವನು ಮೌಲ್ಯಾಧಾರಿತ ಪದ್ದತಿಗಳಿಗೆ ತಾನು ಆದ್ಯತೆಯನ್ನು ಕೊಡುತ್ತೇನೆ ಅವುಗಳ ಮೂಲಕ ಜನರು ಭಯಾನಕ ಕ್ರಿಯೆಗಳನ್ನು ಮಾಡುವದು ತಪ್ಪು ಎಂದು ಘೋಷಿಸುವರು, ಎಂದು ಹೇಳಬಹುದು. ಪೌಲನು ವಿಗ್ರಹಾರಾಧನೆಯನ್ನು ಖಂಡಿಸುವದು ಸಾಧ್ಯ, ಯಾಕಂದರೆ ಜಗತ್ತು ಸೃಷ್ಟಿಯಾಗಿರುವದು ಒಳ್ಳೆಯದನ್ನು ಮತ್ತು ಕೆಟ್ಟದ್ದನ್ನು ನಿರ್ಧರಿಸುವ ಸರ್ವ ಶಕ್ತನಾದ ದೇವರ ಮೂಲಕವೇ. ದೇವರಿರುವ ಕಾರಣದಿಂದಲೇ ಮನುಷ್ಯನ ಜೀವನದಲ್ಲಿ ನೈತಿಕ ಪದ್ಧತಿಯು ಸ್ವಾಭಾವಿಕವಾಗಿದೆ. ಧಾರ್ಮಿಕ ಮತ್ತು ನೈತಿಕತೆಯ ಕುರಿತು ಪ್ರಮೇಯಾತ್ಮಕ ಸತ್ಯಗಳ ಸಾಧ್ಯತೆಗಳಿವೆ, ಯಾಕಂದರೆ ನಿತ್ಯತ್ವದ ಅಸ್ಥಿತ್ವಕ್ಕೆ ಒಬ್ಬನೇ ಮಾರ್ಗದರ್ಶಿಯಾಗಿದ್ದಾನೆ ಮತ್ತು ಆತನ

ಸೃಷ್ಟಿಯನ್ನು ಆಳುತ್ತಾನೆ.

## ಕ್ರೈಸ್ತರಿಗೆ ಸವಾಲುಗಳು

ಕೊರಿಂಥದಲ್ಲಿರುವ ಕ್ರೈಸ್ತರು ವಿಗ್ರಹಾಲಯದಲ್ಲಿ ಊಟಕ್ಕಾಗಿ ಭಾಗವಹಿಸಲು ಬಯಸುವದು, ವಿಗ್ರಹಾರಾಧಕರ ದೇವರನ್ನು ಆರಾಧಿಸುವ ಉದ್ದೇಶಕ್ಕಿಂತ ವಿಗ್ರಹಾರಾಧಕರಾದ ತಮ್ಮ ಸ್ನೇಹಿತರೊಂದಿಗೆ ಅನ್ಯೋನ್ಯ ಭೋಜನವನ್ನು ಸ್ವೀಕರಿಸಲು ಬಯಸುತ್ತಾರೆ. ಪೌಲನು ಅವರ ವಾದವನ್ನು ಅರ್ಥ ಮಾಡಿಕೊಂಡಿದ್ದನು. ಉದ್ಯಮಿಗಳು ಸಹ, ಸಾಮಾಜಿಕ ಹಾಗೂ ಆರ್ಥಿಕ ಲಾಭಗಳಿಗಾಗಿ, ವಿಗ್ರಹಾಲಯದಲ್ಲಿ ವಿಗ್ರಹಕ್ಕೆ ನೈವೇದ್ಯ ಮಾಡಿದ ಮಾಂಸವನ್ನು ಅವರು ಸೇವಿಸಿದ್ದಾಗಿ ಬಲವಾದ ವ್ಯಾಜ್ಯವನ್ನು ಮಾಡಿದ್ದರು. ಆದಾಗ್ಯೂ, ಸಾಮಾಜಿಕ ಮತ್ತು ಆರ್ಥಿಕ ಬೆಲೆಗಳು ಅಂತರ್ಗತವಾಗಿ ದೇವರ ಪಿತೃತ್ವ ಮತ್ತು ಯೇಸುವಿನ ಆಧಿಪತ್ಯವನ್ನು ಅಂಗೀಕರಿಸುವದಾಗಿದೆ. ಕ್ರಿಸ್ತನಲ್ಲಿರಬೇಕಾದರೆ, ಆತ್ಮಸಾಕ್ಷಿಗಳ ವಿಷಯಗಳಲ್ಲಿ ಜಗತ್ತಿನಿಂದ ಬೇರ್ಪಡುವದ ಅವಶ್ಯವಾಗಿದೆ. ಒಂದು ವೇಳೆ ಹಾನಿಕಾರಕ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳು ಹಿಂಬಾಲಿಸಿದರೂ ಸಹ, ವಿಶ್ವಾಸಿಗಳು ದೃಢವಾಗಿರಬೇಕಾಗುತ್ತದೆ. ದೇವರಿಗೆ ಪ್ರಮಾಣಿಕರಾಗುವದಕ್ಕೆ ಅಧರ್ಮವು ಕ್ರೈಸ್ತಧರ್ಮದವರಿಗಾಗಿ ಯಾವಾಗಲೂ ಕಷ್ಟವನ್ನು ಮಾಡುತ್ತದೆ. ಕ್ರೈಸ್ತಧರ್ಮದವರು ಅದನ್ನು ನಿರೀಕ್ಷಿಸಬೇಕು. ಈ ಸಹೋದರರಿಗೋಸ್ಕರ ವಿಗ್ರಹಾರಾಧನೆಯು ಮುಖಾಮುಖಿಯಲ್ಲಿ ಕೇಂದ್ರೀಕೃತವಾಗಿದೆ, ಮತ್ತು ಯಾವುದೇ ಅಂತಹ ರೂಢಿಯು ಕ್ರಿಸ್ತನನ್ನು ಅಂಗೀಕರಿಸಿದವರಿಗೆ ಅಸಹನೀಯವಾಗಿದೆ (10:19-21 ನೋಡಿರಿ).

## ವಿಗ್ರಹಾರಾಧನೆಯ ದೀರ್ಘಪ್ರಯತ್ನವು

ಈ ದಿನದ ನಮ್ಮ ಜಗತ್ತಿನ ಧಾರ್ಮಿಕ ದೃಶ್ಯವು ಎರಡು ಸಾವಿರ ವರ್ಷಗಳ ಹಿಂದೆ ಇದ್ದ ಕೊರಿಂಥದವರಿಗಿಂತ ಗಣನೀಯವಾಗಿ ಬಿನ್ನವಾಗಿದೆ. ಸಮಕಾಲೀನ ಕ್ರೈಸ್ತ ಧರ್ಮದವರು ವಿಗ್ರಹಾರಾಧನೆಯ ಕುರಿತಾದ ಪೌಲನ ಬುದ್ದಿವಾದವನ್ನು ಅಸಂಭದ್ಧವಾದದ್ದೆಂದು ತಳ್ಳಿಹಾಕಬಹುದು. ಕೆಲವರು, ಒಂದು ವೇಳೆ ನಮ್ಮಲ್ಲಿ ಯಾರಾದರೂ ದೇವಸ್ಥಾನದಲ್ಲಿ ಕುಳಿತು ದೇವರಿಗೆ ನೈವೇದ್ಯ ಮಾಡಿದ ಆಹಾರವನ್ನು ಉಣ್ಣಲು ಸಾಮಾಜಿಕ ಒತ್ತಡದ ಅನುಭವವನ್ನು ಹೊಂದಿದ್ದಿರಬಹುದು. ಆದಾಗ್ಯೂ, ಹತ್ತಿರದಿಂದ ಪರೀಕ್ಷಿಸಿದರೆ, ನಾವು ಆಲೋಚಿಸಿದ ಹಾಗೇ, ಸಂಪೂರ್ಣವಾಗಿ ನಾವು ವಿಗ್ರಹಾರಾಧನೆಯನ್ನು ತಿರಸ್ಕರಿಸಿಲ್ಲದಿರಬಹುದಾದ ಸಾದ್ಯತೆಯು ತಿಳಿದುಬರುತ್ತದೆ.

ಅನೇಕ ಬಗೆಯ ವಿಗ್ರಹಾರಾಧನೆಯು ಈಗಲೂ ರೂಢಿಯಲ್ಲಿವೆ. ಭವಿಷ್ಯವನ್ನು ಹೇಳುವವರು, ಅಭೌತ ಪ್ರಭಾವಕ್ಕೆ ಒಳಗಾದವರೂ, ಮತ್ತು ಯಥೇಚ್ಛವಾಗಿರುವ ಮಾಂತ್ರಿಕ ವಿದ್ಯೆಗಳಿಂದ ಕೆಲಸ ಮಾಡುವದಾಗಿ ಹೇಳುವ ಇತರರು. ಚಿಹ್ನೆಯಿಂದ ಹಸ್ತಸಾಮುದ್ರಿಕೆಯ ಸೇವೆಯನ್ನು ತಿಳಿಸುವ ಜಾಹೀರಾತುಗಳು ಮತ್ತು ಟ್ಯಾರೋ ಕಾರ್ಡ್‌ಗಳು. ಸಣ್ಣ ಪಟ್ಟಣಗಳ ಪತ್ರಿಕೆಗಳಲ್ಲಿಯು ಸಹ ಇರುವ ಜಾತಕದ ಲಕ್ಷಣಗಳ ಕಾಲಮ್ಮುಗಳು. ಯಾರಾದರೂ ತಮ್ಮ ಉದ್ಯಮದಲ್ಲಿ ಈ ಕಣಿ ಹೇಳುವವರನ್ನು ಪೋಷಿಸುತ್ತಿರಬಹುದು. ಮೋಶೆಯು ಅಂತಹ ರೂಢಿಗಳು ಪರಲೋಕ ಮತ್ತು ಭೂಲೋಕದ ಒಬ್ಬನೇ ದೇವರನ್ನು ಆರಾಧಿಸುವವರೊಂದಿಗೆ

ಹೊಂದಾಣಿಕೆಯಾಗಲಾರವು ಎಂದು ಸ್ಪಷ್ಟಪಡಿಸುತ್ತಾನೆ (ಧರ್ಮೋ 18:10, 11).

ಖಂಡಿತವಾಗಿಯೂ, ಪೌಲನು ಅಪಾಯಕಾರಿಯಲ್ಲದ ಮೋಜು ಎಂದು ಸಾಧಿಸಿದ ಅಂತಹ ರೂಢಿಗಳನ್ನು ತಿರಸ್ಕರಿಸುತ್ತಿದ್ದನು, ಅವನು ಕೊರಿಂಥದವರು ವಿಗ್ರಹಾರಾಧನೆಯು ವ್ಯವಹಾರಕ್ಕೆ ಒಳೆಯದು ಎಂದು ವಾದ ಮಾಡಿದ್ದನ್ನು ತಿರಸ್ಕರಿಸಿದ ಹಾಗೆಯೇ. ಭವಿಷ್ಯವು ದೇವರ ಕೈಗಳಲ್ಲಿದೆ, ಅಥವಾ ಅದು ನಕ್ಷತ್ರಗಳ ಮೂಲಕ ಮತ್ತು ಕೈಗಳ ಹಸ್ತಗಳ ಮೇಲೆ ತಿಳಿಸಲ್ಪಡುತ್ತದೆ. ಭವಿಷ್ಯವು ಎರಡೂ ಸ್ಥಳಗಳಲ್ಲಿ ಇಲ್ಲ. ದೇವರು ತನ್ನ ಮಹಿಮೆಯನ್ನು ಅಥವಾ ಸಾರ್ವಭೌಮತ್ವವನ್ನು ನಕ್ಷತ್ರಗಳು, ಹಸ್ತಗಳು, ಅಥವಾ ಮಾಂತ್ರಿಕ ಆಚರಣೆಗಳೊಂದಿಗೆ ಹಂಚಿಕೊಳ್ಳುವದಿಲ್ಲ. ವಿಗ್ರಹಾರಾಧನೆಯು ಸತ್ತಿಲ್ಲ. ಜ್ಯೋತಿಷ್ಯದ ಅಂಕಣಗಳು ಅಥವಾ ಹಸ್ತಸಾಮುದ್ರಿಕರ ಅಪಾಯಕಾರಿಯಲ್ಲದ ಮೋಜು ಎಂದುಕೊಂಡು ವಿಚಾರಿಸುವವರು ಸಹ "ಅಂತಹ ರೂಢಿಗಳು ಪ್ರತಿಯೊಬ್ಬರಿಗೂ ಅಪಾಯಕಾರಿಯಲ್ಲದ ಮೋಜಾಗಿವೆಯೋ? ಒಂದು ವೇಳೆ ಈ ನಡವಳಿಕೆಯು ಬಲಹೀನ ಸಹೋದರನು ಪಾಪ ಮಾಡುವದಕ್ಕೆ ಪ್ರಭಾವ ಬೀರುತ್ತದೆಯೋ? ಎಂದು ಕೇಳಬೇಕು. ನಮ್ಮ ಕ್ರಿಯೆಗಳು ತಮ್ಮಲ್ಲಿಯೇ ಸರಿಯಾಗಿವೆ ಎನ್ನುವದಷ್ಟನ್ನೇ ಪೌಲನಿಗೆ ಸಂಬಂಧಪಟ್ಟದ್ದಾಗಿರಲಿಲ್ಲ, ಆದರೆ ಆಸಕ್ತಿಯಿಂದ ಸರಿಯಾಗಿರಬೇಕೆಂದು ಪ್ರಯತ್ನಿಸುತ್ತಿರುವವರು ನಮ್ಮ ಉದಾಹರಣೆಯನ್ನು ವೀಕ್ಷಿಸುತ್ತಿರುವವರಿಗೆ ಅದು ಸರಿಯಾದದ್ದು ಎಂಬುದನ್ನು ಗ್ರಹಿಸುವಂತಿರಬೇಕು.

ಒಟ್ಟಾರೆ ವಿಗ್ರಹಾರಾಧನೆಯೊಂದಿಗೆ, ಕ್ರೈಸ್ತರು ತಮ್ಮ ನಂಬಿಕೆಗೆ ತಮಗೆ ಪ್ರಾಮುಖ್ಯವಾಗಿರುವ ಕಳಕಳಿಯನ್ನು ಮತ್ತು ಆಸಕ್ತಿಯನ್ನು ದೇವರಿಗೆ ಅಧೀನ ಪಡಿಸಿಕೊಳ್ಳುತ್ತಾರೆ. ನಿಜವಾದ ಅರ್ಥದಲ್ಲಿ, ನಮ್ಮ ಜೀವಿತದಲ್ಲಿ ಶ್ರೇಷ್ಠತೆಯನ್ನು ತೆಗೆದುಕೊಳ್ಳುವ ಯಾವುದೇ ಆಗಿರಲಿ, ಅತ್ಯಂತ ಪ್ರಾಮುಖ್ಯವಾಗಿರುವ ಯಾವುದೇ ಆಗಿರಲಿ ಅದು ದೇವರ ಮಹಿಮೆಗಿಂತ ಹೆಚ್ಚಾಗಿದ್ದರೆ ಅದು ವಿಗ್ರಹವಾಗಿದೆ. ಪೌಲನು "ದುರಾಶೆ ವಿಗ್ರಹಕ್ಕೆ ಸಮಾನ" ಎಂದು ಎಚ್ಚರಿಸುವಲ್ಲಿ ಪೌಲನು ಹಿಂಜರಿಯಲಿಲ್ಲ (ಕೊಲಸ್ಸೆ 3:5). ಈ ತತ್ವದ ಮೇಲೆ ವಿಸ್ತರಿಸುತ್ತಾ, ನಾವು ನಮ್ಮ ಕುಟುಂಬ, ಸ್ವಾಸ್ಥ್ಯ, ಜನಪ್ರಿಯತೆ, ಕೌಶಲ್ಯ, ಕ್ರೀಡಾ ತಂಡಗಳು, ಸಾಹಸಗಳು ಅಥವಾ ಇನ್ನಿತರ ಅನೇಕ ಸಂಗತಿಗಳು. ಒಟ್ಟಾರೆ ತತ್ವಗಳಲ್ಲಿ, ದೇವರು ಮತ್ತು ಆತನ ಮಹಿಮೆಯ ಮುಂದೆ ಯಾವುದು ಇರಬಾರದು; ಆದರೆ ಅದರಿಂದಾಚೆಗೆ, ಒಬ್ಬನ ಉದಾಹರಣೆ ಇನ್ನೊಬ್ಬನ ಮೇಲೆ ಪ್ರಭಾವ ಬೀರಬಹುದು, ಅವನ ನಡತೆ ಆತ್ಮೀಕ ಅರಿವು ತನ್ನ ಸ್ವಂತದ್ದಕ್ಕಿಂತ ಬಲಹೀನವಾಗಿರಬಹುದು ಇತರರನ್ನು ತಪ್ಪಾದ ಮಾರ್ಗದಲ್ಲಿ ನಡೆಸಬಹುದು.

## ಟಿಪ್ಪಣಿಗಳು

[1]Everett Ferguson, *Backgrounds of Early Christianity* (Grand Rapids, Mich.: Wm. B. Eerdmans Publishing Co., 1987), 110. [2]C. L. Thompson discussed archaeological evidence of dining facilities in pagan temples. (C. L. Thompson, "Corinth," in *The Interpreter's Dictionary of the Bible*, Supplementary Volume, ed. Keith Crim [Nashville: Abingdon Press, 1962], 180.) [3]ಈ ಜ್ಞಾನವು ಸಭೆಗಳನ್ನು ಹಾವಳಿ ಮಾಡಿದ ಜ್ಞಾನತತ್ವಗಳ ಸಿದ್ಧಾಂತಗಳೊಂದಿಗೆ ಸಂಬಂಧ ಹೊಂದಿರಲಿಲ್ಲ (ಉದಾಹರಣೆ 1 ತಿಮೋಥೆ 6:20; 2 ಯೋಹಾನ 7 ನೋಡಿ). ಜ್ಞಾನತತ್ವವಾದವು ಆರಂಭಿಕ

ಸಭೆಯಿಂದ ಕೆಲವು ಆಲೋಚನೆಗಳನ್ನು ಅಳವಡಿಸಿಕೊಂಡ ಧಾರ್ಮಿಕ ಮತ್ತು ತಾತ್ವಿಕ ನಂಬಿಕೆಗಳ ಸಂಕೀರ್ಣವಾಗಿದೆ. ಇದು ಅಸ್ಥಿತ್ವವಾದದ ಮಾನಸಶಾಸ್ತ್ರದ ವಿಭಾಗವಾದ ಡ್ವಿಯೆಲಿಜಮ್ ನ ಲಕ್ಷಣಗಳಿಂದ ರೂಪಿಸಲ್ಪಟ್ಟದೆ. ಪದಾರ್ಥ, ಮಾನವ ದೇಹವು ಸೇರಿದಂತೆ, ಜ್ಞಾನತತ್ವವಾದಿಗಳ ಆಲೋಚನೆಯಲ್ಲಿ ಕೆಟ್ಟದ್ದನ್ನು ಒಳಗೊಂಡಿತ್ತು; ಆತ್ಯಾತ್ಮಿಕವಾದದ್ದು ಒಳ್ಳೆಯದು. ಪದಾರ್ಥ ಸಂಬಂಧವಾದಗಳು ದುಷ್ಟವೆಂದು ಪರಿಗಣಿಸಲಾಗುವದರಿಂದ, ಯೇಸು ನಿಜವಾಗಿಯೂ ರಕ್ತಮಾಂಸದಲ್ಲಿ ಬದುಕಿದನೆಂಬುದನ್ನು ಜ್ಞಾನತತ್ವವಾದಿಗಳು ನಿರಾಕರಿಸಿದರು. ಅವರು ಕೇವಲ ದೈಹಿಕವಾಗಿದಂತೆ ಕಾಣುತ್ತದೆ ಎಂದು ಹೇಳಿದರು. ಈ ಸಿದ್ಧಾಂತವನ್ನು ಗ್ರೀಕ್ ಪದದ ಅರ್ಥವಾದ "ತೋರುವಂತೆ" ಎಂಬ ಅರ್ಥಕೊಡುವ "Docetism," ಎಂದು ಕರೆಯಲಾಯಿತು. [4]David E. Garland, *1 Corinthians*, Baker Exegetical Commentary on the New Testament (Grand Rapids, Mich.: Baker Academic, 2003), 355. [5]William Cowper, "Winter Walk at Noon," in *The Poems of William Cowper*, vol. 2 (Chiswick: C. Whittingham, 1817), 139. [6]This statement was made in regard to psychology in Herbert Feigl, *American Psychologist* 14 (March 1959): 115–28. [7]The latter word is used in 10:28. Although the NASB translates both words "sacrificed to idols," the two Greek words would have had considerably different connotations for a pious pagan.7ನಂತರದ ಪದವನ್ನು 10:28 ಬಳಸಲಾಗಿದೆ NASB ವಿಗ್ರಹಾರ್ಪಿತಗಳೆಂದು ಎರಡು ಪದಗಳು ಅನುವಾದಿಸಿದರೂ ಸಹ ಎರಡು ಗ್ರೀಕ್ ಪದಗಳು *"sacrificed to idols,"* ಮೂರ್ತಿ ಪೂಜೆ ಮಾಡುವವರ ಭಕ್ತಿಯ ಕುರಿತು ಗಣನೀಯವಾದ ವಿಭಿನ್ನ ಅರ್ಥಗಳನ್ನು ಹೊಂದಿದ್ದವು. [8]Josephus *Against Apion* 2.23 [191]. [9]*Enuma Elish*, an Akkadian work also called "The Creation Epic," is included in James B. Pritchard, ed. *Ancient Near Eastern Texts Relating to the Old Testament*, 3rd ed. (Princeton: Princeton University Press, 1969), 60-99. [10]ವಿವಿಧ ಬರಹಗಾರರು ವಿವಿಧ ಗ್ರಂಥಗಳಲ್ಲಿ "ಲೇಡಿ ವಿಜಿಡಮ್" ನ ಚಿತ್ರವನ್ನು ಕಂಡುಕೊಳ್ಳುತ್ತಾರೆ. ಪ್ರಲಾಪಗಳಲ್ಲಿ ಅವಳು ಬೀದಿಗಳಲ್ಲಿ ಗಟ್ಟಿಯಾಗಿ ಕೂಗುತ್ತಾನೆ (1:15, 16). ವಿಜಿಡಮ್ ಎಂಬುದು ಅಪೊಕೃಪದ ಬುದ್ಧಿವಂತಿಯ ಕೃತಿಗಳಲ್ಲಿ ತನ್ನ ಮಕ್ಕಳಿಗೆ ಕಲುಹಿಸಲು ಪ್ರಯತ್ನಿಸುತ್ತಿರುವ ಮಹಿಳೆಯನ್ನು ತೋರಿಸುತ್ತದೆ. "ಮಹೋನ್ನತನ ಬಾಯಿಯಿಂದ ನಾನು ಹೊರಬಿದ್ದೆನು, ಮತ್ತು ಮಂಜುಗಡ್ಡೆಯೂ ಭೂಮಿಯನ್ನು ಮುಚ್ಚಿತು" ಎಂದು ವಿಜಿಡಮ್ ಹೇಳುತ್ತದೆ (Sirach 24:3; NAB); "ವಾಸ್ತವವಾಗಿ, ಅವಳು ಒಂದು ತುದಿಯಿಂದ ಮತ್ತೊಂದು ತುದಿಗೆ [ಭೂಮಿಯ ಅಥವಾ ಪರಲೋಕಗಳ] ತಲುಪುತ್ತಾಳೆ." ಮತ್ತು ಎಲ್ಲಾ ವಿಷಯಗಳನ್ನು ಚೆನ್ನಾಗಿ ನಿಯಂತ್ರಿಸುತ್ತಾಳೆ (Wisdom 8:1; NAB).

[11]NLT ನಲ್ಲಿ "ಕೆಲವರು ವಿಗ್ರಹಗಳನ್ನು ನೈಜವೆಂದು ಯೋಚಿಸುವದರಲ್ಲಿ ಒಗ್ಗಿಕೊಂಡಿರುತ್ತಾರೆ, ಆದ್ದರಿಂದ ಅವರು ವಿಗ್ರಹಗಳಿಗೆ ನೀಡಲಾಗುವ ಆಹಾರವನ್ನು ತಿನ್ನುವಾಗ ಅವರು ಅದನ್ನು ನಿಜವಾದ ದೇವರುಗಳ ಪೂಜೆಯೆಂದು ಭಾವಿಸುತ್ತಾರೆ ಮತ್ತು ಅವರ ದುರ್ಬಲ ಮನಸ್ಸಾಕ್ಷಿಯನ್ನು ಉಲ್ಲಂಘಿಸುತ್ತಾರೆ." [12]Walter Bauer, *A Greek-English Lexicon of the New Testament and Other Early Christian Literature*, 3rd ed., rev. and ed. Frederick William Danker (Chicago: University of Chicago Press, 2000), 967. [13]Bruce J. Malina and Jerome H. Neyrey, *Portraits of Paul: An Archaeology of Ancient Personality* (Louisville: Westminster John Knox Press, 1996), 184. [14]Jerome Murphy-O'Connor, *St. Paul's Corinth: Texts and Archaeology*, 3rd rev. and exp. ed. (Collegeville, Minn.: Liturgical Press, 2002), 186.